
# ಹಿಂದು ವಾಣಿ

ಸಂಪುಟ – 22
ಸಂಚಿಕೆ – 11
ಚೈತ್ರ – ವೈಶಾಖ
ಮೇ 2024
ಬೆಲೆ ರೂ. 15.00

**HINDU VANI**
KANNADA MONTHLY

VOL - 22 ISSUE-11 MAY 2024 BENGALURU PAGES-44 Rs:15/-






ರಾಮಕೃಷ್ಣ ಮಠ–ಮಿಷನ್ ಅಧ್ಯಕ್ಷರ
ಗೌತಮಾನಂದ ಮಹಾರಾಜ್ ಭೇಟಿ
ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ



ಸಮಗ್ರ ಮಹಿಳಾ ಪ್ರಗತಿ ಸಂಕಿರಣ, ಮೈಸೂರು



ಕಾಲೇಜು ವಿದ್ಯಾರ್ಥಿಗಳೊಡನೆ 'ವಿಶ್ವಗುರು ಭಾರತ' ಸಂವಾದ

ಪರಿಷತ್ ಸಂಘಟನಾ ಕಾರ್ಯದರ್ಶಿ ಮಿಲಿಂದ್ ಪರಾಂಡೆ
ಬೆಂಗಳೂರು ಭೇಟಿ






ಲೆಕ್ಕ ಪರಿಶೋಧಕರೊಡನೆ
'ಭಾರತೀಯ ಮೌಲ್ಯಗಳ ಪ್ರಸ್ತುತತೆ'





ಡಾ॥ ಅಂಬೇಡ್ಕರ್ ಜಯಂತಿ – ಹೈಕೋರ್ಟ್ ನ್ಯಾಯಮೂರ್ತಿ ದೇವದಾಸ್ ಆರ್.,
ವಕೀಲರು ಮತ್ತು ವಿಧಿ ಪ್ರಕೋಷ್ಠ ಕಾರ್ಯಕರ್ತರೊಡನೆ, ಮೈಸೂರು





ಅಕ್ಕಮಹಾದೇವಿ ಜಯಂತಿ 'ಮಹಿಳೆ ಅಬಲೆಯಲ್ಲ ಸಬಲೆ' ಸಂವಾದ, ಮಂಗಳೂರು

ಹಿಂದುವಾಣಿ

hinduvani@yahoo.com

ಶ್ರೀ ಕ್ರೋಧಿನಾಮ ಸಂವತ್ಸರ
ಚೈತ್ರ–ವೈಶಾಖ

ಮೇ 2024

ಗೌರವ ಸಂಪಾದಕ
ಟಿ.ಎ.ಪಿ. ಶೆಣೈ

ಪ್ರಕಾಶಕರು
ಎನ್.ಪಿ. ಮುನಿರಾಜು
ವಿಶ್ವ ಹಿಂದು ಪರಿಷದ್, ಕರ್ನಾಟಕ
'ಧರ್ಮಶ್ರೀ', 91 ಶಂಕರಪುರಂ
ಶಂಕರಮಠ ಸಮಾನಾಂತರ ರಸ್ತೆ
ಬೆಂಗಳೂರು – 560 004.
ದೂ. 080–26604641

ಪ್ರಸಾರ ಸಲಹೆ
ಹೆಚ್.ಎಸ್. ಸೀತಾರಾಮು
ರಮೇಶ ಡಿ.
ಶಿವಕುಮಾರ ಮೇಲ್ನಾಡ್
ಶಿವಕುಮಾರ ಬೋಳ್‌ಶೆಟ್ಟಿ
ಎಸ್. ಜಯರಾಮ್

ಚಂದಾವಿವರ

| | |
|---|---|
| ಬಿಡಿಪ್ರತಿ | ರೂ. 15/– |
| ವಾರ್ಷಿಕ ಚಂದಾ | ರೂ. 130/– |
| ದ್ವೈವಾರ್ಷಿಕ ಚಂದಾ | ರೂ. 250/– |

ಮುದ್ರಕರು
ರಾಷ್ಟ್ರೋತ್ಥಾನ ಮುದ್ರಣಾಲಯ
ನಂ.8 & 8/1, ಸತ್ಯಪ್ರಮೋದತೀರ್ಥ ಬಿಲ್ಡಿಂಗ್
3ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ
ಚಾಮರಾಜಪೇಟೆ, ಬೆಂಗಳೂರು – 560 018.
rmudrana@gmail.com


ಸೂಕ್ತಿಶ್ರೀ

# ಅಧರ್ಮಿಗಳ ನಡುವೆ ಧರ್ಮಕ್ಕೆ ಮಾತ್ರವೇ ಗೆಲುವು

– **ಬಿ.ಈ. ಸುರೇಶ,** ಬೆಂಗಳೂರು

**ದುರ್ಜನಸ್ಯ ಶ್ವಪುಚ್ಛಸ್ಯ ವ್ಯಾಲಸ್ಯೋಷ್ಟ್ರಗಲಸ್ಯ ಚ**
**ನ ಮಂತ್ರೈರ್ನೌಷಧೈರ್ವಾಪಿ ಋಜುತಾ ಜಾತು ಜಾಯತೇ॥**

– ಶ್ರೀಮದ್ವಾಲ್ಮೀಕಿ ರಾಮಾಯಣ ಯುದ್ಧಕಾಂಡ

"ದುರ್ಜನರನ್ನು, ನಾಯಿಯ ಬಾಲವನ್ನು, ಹಾವನ್ನು, ಅಥವಾ ಒಂಟೆಯ ಕುತ್ತಿಗೆಯನ್ನು ಮಂತ್ರತಂತ್ರಗಳಿಂದಾಗಲೀ ಔಷಧಿಗಳಿಂದಾಗಲೀ ನೇರವಾಗಿಸುವುದು ಅಸಾಧ್ಯವಾದುದು".

ಜಗತ್ತಿನಲ್ಲಿ ಹೀಗೆ ವಕ್ರತೆಯನ್ನು ಪ್ರದರ್ಶಿಸುವ ಇನ್ನೂ ಹಲವು ವಿಚಾರಗಳಿವೆ. ಮುಖ್ಯವಾಗಿ ಒಬ್ಬ ಕೆಡುಕನ ಗುಣಸ್ವಭಾವಗಳು ವಕ್ರವೆನ್ನುವುದನ್ನೂ ಅದನ್ನು ಬದಲಾಯಿಸುವುದು ಕಷ್ಟವೆಂದೂ ಹೇಳಲೂ ಕೂಡಾ ಈ ಮೇಲಿನ ಉದಾಹರಣೆಗಳನ್ನೂ ಉಲ್ಲೇಖಿಸಲಾಗುತ್ತದೆ.

ನಾಯಿ ಬಾಲವು ಎಂದೆಂದೂ ಡೊಂಕಾಗಿಯೇ ಇರುತ್ತದೆ ಎನ್ನಲು; ಬಾಲವನ್ನು ಒಂದು ಕೊಳವೆಯೊಳಗೆ ತೂರಿಸಿ ಇಟ್ಟರೂ ಕೂಡಾ ಆ ಕೊಳವೆಯನ್ನು ತೆಗೆದು ಬಾಲವನ್ನು ಹೊರ ಬಿಟ್ಟಾಗ ಅದು ಮತ್ತೆ ಡೊಂಕಾಗಿಯೇ ಇರುತ್ತದೆ ಎನ್ನುವುದು ಲೋಕಾರೂಢಿಯ ಮಾತು.

ಇತಿಹಾಸದಲ್ಲಿ ಇಂತಹ ಬುದ್ಧಿಸ್ವಭಾವಗಳ ಬಗ್ಗೆ ಕೇಳುತ್ತಲೇ ಇರುತ್ತೇವೆ. ಭಾರತವು ವಿದೇಶಿಯರ ಕೈಯಲ್ಲಿ ಸೋಲಲು ಇಂತಹ ಸ್ವಾರ್ಥ ಬುದ್ಧಿಯ ವಕ್ರ ದುರ್ಜನರೇ ಕಾರಣ. ಅಲೆಕ್ಸಾಂಡರ್‌ನ ಕಾಲದ

ಅಂಬಿರಾಜ, ಪೃಥ್ವೀರಾಜನಿಗೆ ತೊಡಕಾದ ಜಯಚಂದ, ರಾಣಾ ಪ್ರತಾಪನಿಗೆ ಎದುರಾದ ಮಾನಸಿಂಗರಂತಹ ವಕ್ರಬುದ್ಧಿಗಳು ಹೇರಳವಾಗಿ ಎಲ್ಲಾ ಕಾಲದಲ್ಲೂ ಸಿಗುವರು.


ಇನ್ನು ಉತ್ತಮನಾಗಲು ಅವಕಾಶವಿದ್ದರೂ, ಅದನ್ನು ಬುದ್ಧಿಪೂರ್ವಕವಾಗಿ ನಿರಾಕರಿಸುವ ಡೊಂಕು ಬುದ್ಧಿಗಳೂ ಕಾಣಸಿಗುತ್ತವೆ. ಶ್ರೀ ಕೃಷ್ಣನು ದುರ್ಯೋಧನನನ್ನು ಕುರಿತು ಪಾಂಡವರೊಂದಿಗೆ ಸ್ನೇಹಸಹಕಾರಗಳೊಂದಿಗೆ ಬದುಕುವುದು ಧರ್ಮಮಾರ್ಗವೆಂದು ತಿಳಿಹೇಳಿದರೆ; ಅದಕ್ಕೆ ಅವನು ಉತ್ತರಿಸುತ್ತಾ 'ಜಾನಾಮಿ ಧರ್ಮಂ ನಚಮೇ ಪ್ರವೃತ್ತಿಃ ಜಾನಾಮ್ಯಧರ್ಮಂ ನ ಚ ಮೇ ನಿವೃತ್ತಿ:- ನನಗೆ ಧರ್ಮವೆಲ್ಲವೂ ತಿಳಿದಿದೆ. ಆದರೆ ಅದರಂತೆ ನಡೆದುಕೊಳ್ಳುವ ಮನಸ್ಸು ಬರುತ್ತಿಲ್ಲ. ಅಧರ್ಮವೆಂದರೇನೆಂದು ಕೂಡಾ ತುಂಬಾ ಚೆನ್ನಾಗಿ ಗೊತ್ತಿದೆ. ಆದರೆ ಅದರಿಂದ ಬೇರೆಯಾಗಿ ಇರೋಣವೆಂದು ಕೂಡಾ ಅನಿಸುತ್ತಿಲ್ಲ ಎನ್ನುತ್ತಾನೆ. ಇದು ಅಹಂಕಾರವೇ ಅಥವಾ ಅಜ್ಞಾನವೇ? ಏನೇ ಆಗಿರಬಹುದು. ಆದರೆ ಮನಸ್ಸು ಆ ಮಾರ್ಗವಾಗಿ ನಡೆಯಲಿ ಎನ್ನುವ ಭಾವನೆಯಿಲ್ಲದ ವಕ್ರಬುದ್ಧಿಯಂತೂ ಇದೆ.

ಇನ್ನು ರಾವಣ ನಡೆದುಕೊಂಡುದ್ದು ಕೂಡಾ ಇದಕ್ಕಿಂತ ಭಿನ್ನವಲ್ಲ: ಸೀತಾದೇವಿಯನ್ನು ತಂದ ರಾವಣನಿಗೆ ಎಷ್ಟೊಂದು ಜನ ಎಷ್ಟೊಂದು ರೀತಿಯಲ್ಲಿ ತಿಳಿಹೇಳಿದುದಿದೆ! ಮಾರೀಚನೇ ಮೊದಲು ತಿಳಿ ಹೇಳಿದವನು. ನಂತರ ಹನುಮಂತ, ವಿಭೀಷಣ ಅಷ್ಟೇಕೆ! ಕುಂಭಕರ್ಣನೂ ಎರೆಡೆರಡು ಸಾರಿ, ಬುದ್ಧಿ ಹೇಳಿದನು. ಅದಕ್ಕೆ ರಾವಣನ ಉತ್ತರವಿಷ್ಟೇ 'ಕಡಿದುಬಿದ್ದೇನು! ಆದರೆ ತಲೆಬಾಗೇನು' ಎಂದು. 'ಏಷಾ ಮೆ ಸಹಜೋ ದೋಷಾಃ ಸ್ವಭಾವೋ ದುರತಿಕ್ರಮಃ!' ಹುಟ್ಟುಗುಣವನ್ನು ನಿಯಂತ್ರಿಸುವುದು ಅಸಾಧ್ಯ. ಅದಕ್ಕಾಗಿಯೇ ಹಿರಿಯರು ಹೇಳುವುದು 'ಹುಟ್ಟುಗುಣವು ಸುಟ್ಟರೂ ಹೋಗದು' ಎಂದು. ದುರ್ಜನರ ವಕ್ರಬುದ್ಧಿಗೆ ಈ ಸ್ವಭಾವವೇ ಮುಖ್ಯಕಾರಣ.

ಪಾಂಡವರೊಂದಿಗೆ ಹಗೆಯು ಬೇಡವೆಂದು ಧೃತರಾಷ್ಟ್ರನಿಗೆ ಹೇಳಿದವರು ವಿದುರನಿಂದ ಹಿಡಿದು ಇನ್ನೆಷ್ಟೋ ಜನರು. ಆದರೆ ತನ್ನ ವಕ್ರಬುದ್ಧಿಯಿಂದ ತನ್ನವರನ್ನೂ, ತನ್ನನ್ನು ನಂಬಿದ, ಬೆಂಬಲಿಸಿದ ಅದೆಷ್ಟೋ ಜನರನ್ನು ಅವನು ತನ್ನ ಸ್ವಭಾವದಿಂದ ಬಲಿತೆಗೆದುಕೊಂಡನು. ಇವೆಲ್ಲವುಗಳಿಂದ ನಾವು ಬುದ್ಧಿ ಕಲಿತೆವೇನು? ತನ್ನ ಅಧಿಕಾರಕ್ಕಾಗಿ ತನ್ನ ಸ್ವಾರ್ಥಕ್ಕಾಗಿ ಇಂದಿಗೂ ಹಲವು ಕಪಟ ಕ್ರಮಗಳನ್ನು ಕೈಗೊಳ್ಳುವ ರಾಜಕಾರಣಿಗಳನ್ನು ಕಾಣುತ್ತಿದ್ದೇವೆ. ಹಲವು ದೇಶಗಳಿಂದು ಭಾರತವನ್ನು ದ್ವೇಷಿಸುವುದನ್ನು ಕಾಣುತ್ತಲ್ಲಿದ್ದೇವೆ. ಅವುಗಳಿಗೆ ಕುಮ್ಮಕ್ಕು ಕೊಡುವ ಹಲವು ರೀತಿಯ ವಕ್ರಬುದ್ಧಿಯನ್ನು ನಮ್ಮ ವಿರೋಧ ಪಕ್ಷಗಳಲ್ಲಿ ನಾವಿಂದು ಕಾಣುತ್ತಿದ್ದೇವೆ. ಇದು ಭಾರತದ ಚರಿತ್ರೆಯಲ್ಲಿ ಲಾಗಾಯ್ತಿನಿಂದ ಕಂಡ ವಾಸ್ತವತೆ. ಆದರೆ 'ಯತೋಧರ್ಮಸ್ತತೋ ಜಯಃ' ಎನ್ನುವ ಗಾಂಧಾರಿ ವಾಕ್ಯವೇ ಗೆಲ್ಲುವುದು ಭಾರತದ ಇತಿಹಾಸ.

ವಿಶ್ವ ಹಿಂದು ಪರಿಷದ್ ಮಾಹಿತಿ ಮತ್ತು ಹಿಂದುವಾಣಿ epaper
www.vhp.org

## ಎಂದಿನಂತೆ




**ಆಚಾರ್ಯ ಶಂಕರರು**
ಮುಖಪುಟ ಲೇಖನ
ಪುಟ 10


3 **ಸೂಕ್ತಿಶ್ರೀ**
ಅಧರ್ಮಿಗಳ ನಡುವೆ ಧರ್ಮಕ್ಕೆ ಜಯ

6 **ಪ್ರತಿಧ್ವನಿ**

7 **ಸಂಪಾದಕೀಯ**
ಇಂಡಿಯಾವನ್ನು ಮರೆಯಬೇಕು

28 **ಕವನ**
ಹಕ್ಕಿಗಳೊಂದಿಗೆ ಹಾರಾಟ

29 **ನಿಮಗೆಷ್ಟು ಗೊತ್ತು?**

30 **ಶಬ್ದಶೋಧ 197**

35 **ಕ್ಷೇತ್ರದರ್ಶನ**
ಶ್ರೀಕ್ಷೇತ್ರ ಗಾಣಗಾಪುರ

39 **ಪ್ರಸ್ತುತ**
ಮತ್ತಷ್ಟು ಬೇಕೆ?


## ತಿಂಗಳ ವಿಶೇಷ


13 ವಂದೇ ಮಾತರಂ

17 ನಾನು ಅವರ ಹಿರೇ ಮಗ

19 ಸೋಲನ್ನೆ ಕಾಣದ ಶ್ರೀಕೃಷ್ಣದೇವರಾಯ

22 ವಿಶ್ವ ಹಿಂದು ಚಿತ್ರಪುಟ

24 ಅಮೇರಿಕಾದಲ್ಲಿ ಶ್ರೀರಾಮ ರಥ ಯಾತ್ರೆ

26 ಆಚಾರ್ಯ ಚಾಣಕ್ಯ

32 ಫೀಲ್ಡ್ ಮಾರ್ಷಲ್ ಕಾರ್ಯಪ್ಪ

14 ಕಾನ್ಹೋಜಿ ಆಂಗ್ರೆ




## ಶ್ರೀ ಗುರೂಜಿ ವ್ಯಕ್ತಿತ್ವ

ರಾಷ್ಟ್ರಋಷಿ – ಶ್ರೀ ಗುರೂಜಿ ಲೇಖಕರಿಗೆ ಧನ್ಯವಾದಗಳು. ಗುರೂಜಿಯವರ ಹಲವು ಹತ್ತು ಜೀವನ ಪ್ರಸಂಗಗಳೊಡನೆ; ಅವುಗಳಿಂದ ಕಾರ್ಯಕರ್ತನೊಬ್ಬನು ರೂಪುಗೊಳ್ಳುವ ಬಗೆಯನ್ನು ತಿಳಿಹೇಳುವ ಲೇಖನವನ್ನು ಪ್ರಸ್ತುತ ಪಡಿಸಿ ಉಪಕರಿಸಿದಂತಾಗಿದೆ. ಗುರೂಜಿಯವರ ಉನ್ನತ ವ್ಯಕ್ತಿತ್ವದ ಪರಿಚಯವೂ ಆದಂತಾಯಿತು.

**–ನಾರಾಯಣನ್ ಮಲ್ಲೇಶ್ವರ, ಬೆಂಗಳೂರು**

## ರಾಷ್ಟ್ರೀಯತೆಯ ಜಾಗೃತಿ

ಹಿಂದುವಾಣಿಯ ಲೇಖನಗಳನ್ನು ಓದುತ್ತಿದ್ದಂತೆ ರಾಷ್ಟ್ರೀಯತೆಯು ಜಾಗೃತವಾಗುವ ಂತೆ ವಿಚಾರಗಳ ಜೋಡಣೆಯಿದೆ. ಎಲ್ಲಾ ಲೇಖಕರಿಗೆ ಹೃತ್ಪೂರ್ವಕ ನಮನಗಳು.

**– ವಿಶ್ವೇಶ್ವರ ಗಾಯತ್ರಿ, ಬೆಂಗಳೂರು**

## ಬುದ್ಧಿಯನ್ನು ಕೆಣಕುವ ಪುಟ

‘ಶಬ್ದಶೋಧ’ ಅಂಕಣವಾಗಲೀ, ‘ನಿಮಗೆಷ್ಟು ಗೊತ್ತು’ ಪ್ರಶ್ನೆಗಳಾಗಲೀ ಬುದ್ಧಿಯನ್ನು ಕೆಣಕುವ ಪುಟಗಳು. ಶ್ರಮಪಟ್ಟು ಅವನ್ನು ಸಿದ್ಧಪಡಿಸುವ ಲೇಖಕಿಯರಿಗೆ ಧನ್ಯವಾದಗಳು.

**– ಪ್ರಸನ್ನಾ, ಸಿದ್ಧರಾಜು, ನೆಲಮಂಗಲ**

## ಆಸಕ್ತಿಕರ ಲೇಖನ

ಸಿ.ಎ.ಎಯ ಹಲವು ಮುಖಗಳನ್ನು ಪರಿಚಯಿಸುವ ಲೇಖನ ಮತ್ತು ತಮಿಳುನಾಡಿನ ರಾಜಕಾರಣಿಗಳ ಬೇಕಾಬಿಟ್ಟಿ ಹೇಳಿಕೆಗಳನ್ನು ನಿಯಂತ್ರಿಸುವ ಪ್ರಸಂಗಗಳ ಎರಡು ಲೇಖನಗಳು ಆಸಕ್ತಿಕರವಾಗಿವೆ.

**– ವಿವೇಕಾನಂದ, ಹೊಸೂರು**

## ಮಹಾಭಾರತ ಸಂದೇಶ

ಮಹಾಭಾರತ ಮತ್ತು ರಾಮಾಯಣಗಳು ಉಲ್ಲೇಖಿಸಿದ ವಿಚಾರಗಳು ಇಂದು ರಾಜಕಾರಣದಲ್ಲಿ ಅನ್ವಯವಾಗುತ್ತಿರುವುದು ಕುತೂಹಲಕಾರಿ ಅಂಶಗಳಾಗಿವೆ.

**– ಚೇತನ್, ಹೊಸನಗರ**

# ಇಂಡಿಯಾವನ್ನು ಮರೆಯಬೇಕಿದೆ ಭಾರತ

ಮೊದಲ ಪ್ರಧಾನಿಯಾಗಿದ್ದ ನೆಹರೂ; ತಮ್ಮನ್ನು ತಾವು 'ಭಾರತವನ್ನು ಆಳಿದ ಕೊನೆಯ ಇಂಗ್ಲಿಷ್ ಮನುಷ್ಯ' ಎಂದು ಕರೆದುಕೊಳ್ಳುತ್ತಿದ್ದರು. ಆ ಹೇಳಿಕೆಯಿಂದ ಅವರಿಗೆ ಹೆಮ್ಮೆ ಎನಿಸುತ್ತಿದ್ದುದೂ ಹೌದು! ಅವರ ಮನೆಯ ವಾತಾವರಣವೂ ಹಾಗೆಯೇ ಇದ್ದಿತು. ನೆಹರೂ ತಂದೆ ಮೋತಿಲಾಲ ನೆಹರೂ ಮನೆಯಲ್ಲಿ ಇಂಗ್ಲಿಷ್ ಭಾಷೆಯಲ್ಲೇ ಮಾತನಾಡುತ್ತಿದ್ದರು. ಅವರ ಅಡಿಗೆ ಮನೆಯಲ್ಲಿ ಇರುತ್ತಿದ್ದುದು ಪಿಂಗಾಣಿಯ ಪರಿಕರಗಳು. ಜವಹರನನ್ನು ಇಂಗ್ಲಿಷ್ ಮನುಷ್ಯನನ್ನಾಗಿಸಲೆಂದು ಮೋತಿಲಾಲ್ ಆತನನ್ನು ಅವನ 15ನೇ ವಯಸ್ಸಿನಲ್ಲೇ ಇಂಗ್ಲೆಂಡಿಗೆ ಕಳುಹಿಸಿದರು. ಆ ಪರಿಸರವು ಭಾರತದಲ್ಲಿ ಆ ಕಾಲದ ಬಿಳಿಯರಲಿದ್ದಂತಹ ಅಹಂಕಾರವನ್ನೇ ನೆಹರೂರವರಲ್ಲೂ ಬೆಳೆಸಿತು. ನೆಹರೂರವರ ಆ ಅಹಂಕಾರ ಅದೆಷ್ಟು ಅತಿಯಾಗಿತ್ತು ಎಂದರೆ ಗಾಂಧೀಜಿಯನ್ನೇ ಈ ನೆಹರೂ; 'ವೈಚಾರಿಕವಾಗಿ ಅತಿ ಹಿಂದುಳಿದವರು' ಎಂದು ಕರೆದಿದ್ದರು.

ತಾನು ಸರ್ವಜ್ಞನೆನ್ನುವ ಈ ಅಹಂಕಾರವೇ ನೆಹರೂರನ್ನು ತಮಗೆ ತೋಚಿದಂತಹ ಆಡಳಿತ ನೀತಿಯನ್ನು ನಿರ್ಧರಿಸುವಂತೆ ಮಾಡಿತು. ಹಾಗೆ ನೋಡಿದರೆ ನೆಹರೂ ಭಾರತದ ಸ್ವತ್ವವನ್ನು ನೆಲೆಗೊಳಿಸುವ ಸ್ವತಂತ್ರ ವೈಚಾರಿಕ ವಾತಾವರಣವನ್ನು ನಿರ್ಮಿಸಬಹುದಾಗಿದ್ದಿತು. ಸುಭದ್ರ ಭಾರತೀಯ ಸಮಾಜವನ್ನು ಕಟ್ಟುವಲ್ಲಿ ಹಿಂದು ಮಣ್ಣಿನ ಸೊಗಡನ್ನು ಸೇರಿಸುವುದು ಅವರ ಪಾಲಿಗೆ ಸುಲಭವಾಗಿದ್ದಿತು. ನೆಹರೂ ಮತ್ತು ಗಾಂಧಿಯವರನ್ನು ಅಂದು ಗಾಬರಿಗೊಳಿಸಿದ ಮುಸ್ಲಿಂ ಮಾನಸಿಕತೆಯನ್ನು ಸಂತೈಸಬೇಕೆನ್ನುವ ದರ್ದು ಕೂಡಾ ಅವರು ಅಂದುಕೊಂಡ ಪ್ರಮಾಣದಲ್ಲಿರಲಿಲ್ಲ. ಮುಸ್ಲಿಮರಲ್ಲಿ ಆಗ ಕಾಣುತ್ತಿದ್ದುದು ಪಾಪಪ್ರಜ್ಞೆ ಮತ್ತು ಹಿಂಜರಿಕೆಯ ಮನೋಭಾವ. ಆ ಕಾಲದ ಮುಸ್ಲಿಂ ಸಿನಿಮಾ ನಟರೆಲ್ಲರೂ ತಮ್ಮನ್ನು ಹಿಂದು ಹೆಸರುಗಳಿಂದ ಕರೆಸಿಕೊಳ್ಳಲು ಸಿದ್ಧರಾದುದು ಅಂದಿನ ಪ್ರಮುಖ ಬೆಳವಣಿಗೆ.

ಅರ್ಜುನ್ ಎನ್ನುವವನು ನಿಜವಾಗಿ ಫಿರೋಜ್ ಖಾನ್ ಆಗಿದ್ದವನು. ಯೂಸುಫ್ ಖಾನ್ ಎನ್ನುವ ನಟನು ತನ್ನನ್ನು ದಿಲೀಪ್ ಕುಮಾರ್ ಎಂದು ಕರೆಸಿಕೊಂಡನು. ಮೀನಾಕುಮಾರಿ ಎಂಬ ನಟಿ ಮಹಜಬೀನ್ ಆಗಿದ್ದವಳು. ಸಂಜಯ ಎಂದು ಕರೆಸಿಕೊಂಡವನ ಹೆಸರು ಶಾ ಅಬ್ಬಾಸ್ ಖಾನ್ ಆಗಿದ್ದಿತು. ಹಮೀದ್ ಅಲಿಖಾನ್, ಅಜಿತ್ ಆಗಿಬಿಟ್ಟನು. ನರ್ಗಿಸಳ ಹೆಸರು ಫಾತಿಮಾ ರಶೀದ್. ಮಧುಬಾಲ ನಿಜವಾಗಿ ಮಮ್ತಾಜ್ ಜಹಾನ್ ಎಂಬ ಹೆಸರಿನವಳು. ಜಯಂತ ಎನ್ನುವ ಹೆಸರಿನವರು ನಿಜವಾಗಿ ಝಕಾರಿಯಾ ಖಾನ್. ನವಾಜ್ ಬಾನು ಎಂಬಾಕೆ ನಿಮ್ಮಿ ಆಗುತ್ತಾಳೆ. ಜಗದೀಪ್ ತನ್ನ ಹೆಸರು ಸೈಯದ್ ಎನ್ನುವುದನ್ನು ಮರೆಮಾಚಿದ್ದನು. ಸಮಾಜದ ಎಲ್ಲಾ ವರ್ಗಗಳಿಗೂ ಬೇಕೆನಿಸಿದ ಈ ನಟರು ಇಂತಹ ನಿರ್ಧಾರವನ್ನು ತಳೆದುದು ಎಲ್ಲಾ ಕ್ಷೇತ್ರಗಳಿಗೂ ಮಾದರಿಯಾಗಬಹುದಾಗಿದ್ದಿತು. ನೆಹರೂ ಈ ಬೆಳವಣಿಗೆಗೆ ಪುಟ ನೀಡುವ ಬದಲು ಇಂತಹ ಬದಲಾವಣೆಯನ್ನು ಉದ್ದೇಶಪೂರ್ವಕವಾಗಿ ತಡೆದರು.

ಸರ್ಕಾರವು ಉದ್ಯಮ ಕ್ಷೇತ್ರದಲ್ಲಿ ಮಾಲೀಕನಾಗಿ ಲಾಭಗಳಿಸುವ ಸಮತಾವಾದದ ಪ್ರಯೋಗವೂ ನೆಹರೂರಿಂದ ನಡೆದು ಭಾರತೀಯರ ಧೈರ್ಯ ಸಾಹಸ, ನಿರ್ಧಾರ ಕೈಗೊಳ್ಳುವ ಪ್ರವೃತ್ತಿಯನ್ನು ಹತ್ತಿಕ್ಕಿತು. ಇದರಲ್ಲಿ ಕಮ್ಯೂನಿಸಂನ ವೈಚಾರಿಕತೆಗಿಂತಲೂ ತಾನು ಭಾರತದ ಎಲ್ಲ ಕ್ಷೇತ್ರಗಳನ್ನು ನಿಯಂತ್ರಿಸುವೆ ಎನ್ನುವ ಅಹಂಕಾರವೂ ಅಡಗಿದ್ದಿತು. ಖಾಸಗಿ ಜನರು ಶ್ರೀಮಂತರಾಗಬೇಕಿಲ್ಲ ಎನ್ನುವ ಗ್ರಹಿಕೆ ದೇಶವನ್ನು ಸಾಲದ ಭಿಕ್ಷೆಗೆ ಒಳಗಾಗಿಸಿತು. ಶ್ರೀಮಂತಿಕೆಯನ್ನು ಹಂಚುವೆ ಎಂದು ಹೊರಟ ಸರ್ಕಾರ ತನ್ನೆಲ್ಲ ಕಾರ್ಖಾನೆಗಳ ನಷ್ಟವನ್ನು ದೇಶದ ಅಳಿದುಳಿದ ಶ್ರೀಮಂತರು ನೀಡುವ ತೆರಿಗೆಯಿಂದ ತುಂಬಿಸಿಕೊಳ್ಳಬೇಕಾಯಿತು. ಜಗತ್ತಿನ ಶ್ರೀಮಂತ ದೇಶಗಳ ಮುಂದೆ ಭಿಕ್ಷುಕನಾಗಿ ನಿಲ್ಲಬೇಕಾಯಿತು.

ಬ್ರಿಟಿಷರಿಗೆ ಅಭಿವೃದ್ಧಿ ಎಂದರೆ ಜನರ ಅಗತ್ಯವನ್ನು ಪೂರೈಸುವುದಾಗಿರಲಿಲ್ಲ. ತನ್ನ ಅಗತ್ಯಕ್ಕೆ ಬೇಕಾದ ರಸ್ತೆ, ರೈಲುಗಳನ್ನು ಅವರು ಭಾರತಕ್ಕೆ ಪರಿಚಯಿಸಿದರು. ಭಾರತದಲ್ಲಿ ಬೆಳೆಯುವ ನೀಲಿ, ಚಹಾ, ಗೋಧಿ ಮತ್ತು ಹತ್ತಿ ಬೆಳೆಗಳು ಇಂಗ್ಲೆಂಡಿಗೆ ರಫ್ತಾಗಲು ಆದಷ್ಟು ಬೇಗ ಬಂದರುಗಳಿಗೆ ಅವು ತಲುಪಬೇಕಾಗಿದ್ದಿತು. ಆ ಕಾಲದಲ್ಲಿ ಹೇಸರಗತ್ತೆಗಳ ಮೇಲೆ ಹೊರೆಸಿ ಕೊಂಡೊಯ್ಯುವಾಗಿನ ವಿಳಂಬವನ್ನು ತಪ್ಪಿಸಲು ಬಿಳಿಯರಿಗೆ ರೈಲು ಬೇಕಾಗಿದ್ದಿತು. ಸೈನ್ಯದ ಜಮಾವಣೆಗಾಗಿ ಕೆಂಟೋನ್‌ಮೆಂಟ್, ತಮ್ಮ ರಕ್ಷಣೆಗಾಗಿ ಅವನ್ನು ಉಳಿದ ಜನರಿಂದ ಪ್ರತ್ಯೇಕವಾಗಿ ಉಳಿಸಿಕೊಳ್ಳುವುದೆಲ್ಲ ಅವರ ಸುರಕ್ಷತೆಯ ನಿರ್ಧಾರವಾಗಿದ್ದಿತು. ಬ್ರಿಟಿಷ್ ಸಂಸತ್ತು ಭಾರತಕ್ಕಾಗಿ 1881ರಲ್ಲಿ ಫ್ಯಾಕ್ಟರಿ ಆಕ್ಟ್‌ನ್ನು ಅಂಗೀಕರಿಸಿತು. ಆ ಮೂಲಕ ಭಾನುವಾರ ರಜೆಯ ಅಂಗೀಕಾರ ಮತ್ತು ಬಾಲಕಾರ್ಮಿಕರ ನೇಮಕವನ್ನು ಪ್ರತಿಬಂಧಿಸಲಾಯಿತು. ಕೊನೆಗೆ ತಿಳಿದುದೆಂದರೆ ಈ ಕಾನೂನನ್ನು ಕಾರ್ಮಿಕರ ಒಳಿತಿಗಾಗಿ ತಂದಿರಲಿಲ್ಲ. ಭಾರತದ ಉತ್ಪಾದನೆಗಳು ಬೆಲೆಯಲ್ಲಿ ಅಗ್ಗವಾಗಿರಬಾರದು. ಬ್ರಿಟಿಷ್ ವಸ್ತುಗಳಿಗೆ ಸ್ಪರ್ಧೆ ನೀಡದಂತೆ ಆಗಲು ಈ ಕಾನೂನನ್ನು ತಂದಿತ್ತು. ನೆಹರೂ ಮತ್ತು ಅವರ ಸಚಿವ ಸಂಪುಟವು ದೇಶದ ಪ್ರಗತಿಗಿಂತಲೂ ರಷ್ಯಾ ಎನ್ನುವ ಆಗಿನ ಕಮ್ಯೂನಿಸ್ಟ್ ದೇಶವನ್ನು ಮೆಚ್ಚಿಸಲೆಂದೇ ತನ್ನ ಕೈಗಾರಿಕ ನೀತಿಯನ್ನು ರೂಪಿಸುತ್ತಿತ್ತು.

ಬ್ರಿಟಿಷ್ ಶಿಕ್ಷಣದಿಂದ ವಿದ್ಯಾರ್ಥಿಗಳು ತಮ್ಮ ವೈಚಾರಿಕ ಬೆಳವಣಿಗೆಗೆ ಬೇಕಾದ; ಭಾರತದ ಮಣ್ಣಿನ ಸಂಪರ್ಕದಿಂದ ಒದಗಿಬರುವ ತನ್ನತನದ ಸತ್ವವನ್ನು ಕಳೆದುಕೊಂಡರು. ಮೊದಮೊದಲು ಅಂದರೆ ಆಂಗ್ಲರು ಭಾರತವನ್ನು ಬಿಟ್ಟು ಹೋಗುವವರೆಗೆ ಈ ನೆಲದ ಜೀವಂತಿಕೆಯು ಶಿಕ್ಷಣದಲ್ಲಿ ಪ್ರತಿಫಲಿತವಾಗುತ್ತಲೇ ಇತ್ತು. ನೌಕರಿಗೆಂದು ಇಂಗ್ಲಿಷ್ ಶಿಕ್ಷಣವನ್ನು ಪಡೆಯುತ್ತಿದ್ದ ಕಾಲೇಜು ವಿದ್ಯಾಥಿಗಳಲ್ಲಿ ಮಾತ್ರ ಈ ಪರಕೀಯತೆಯು ಕಾಣಲು ಪ್ರಾರಂಭವಾಗಿದ್ದಿತು. ಆದರೆ ನೆಹರೂ ಕಾಲದಲ್ಲಿ ಇಂತಹ ಅಸಹಜ ಪ್ರಭಾವವು ಪ್ರಾಥಮಿಕ ಶಿಕ್ಷಣವನ್ನೂ ಆವರಿಸಿಬಿಟ್ಟಿತು. ಗ್ರೀಕ್ ಪುರಾಣವಾದ ಇಲಿಯಡ್ ಹೋಲಿಕೆಯಲ್ಲಿ ಒಂಬತ್ತು ಪಟ್ಟು ವಿಸ್ತಾರವಾದ ಮಹಾಭಾರತ ಮತ್ತು ಅದರ ಸಂಕೀರ್ಣತೆಯನ್ನು ಮೆಚ್ಚುವ ಮಟ್ಟದಲ್ಲಾದರೂ ಇದ್ದ ವಿದ್ಯಾರ್ಥಿಗಳು ತಮ್ಮ ಮಹಾಕಾವ್ಯಗಳಿಂದ ದೂರವಾದುದು ನೆಹರೂ ಕಾಲದಲ್ಲಿ. ಭಗವದ್ಗೀತೆಯು ಮಹಾಭಾರತದ ಪ್ರಕ್ಷಿಪ್ತ ಭಾಗವಾಗಿದ್ದುದು ಒಂಬತ್ತನೇ ಶತಮಾನದಲ್ಲಿ ಎಂದು ರೋಮಿಲಾ ಥಾಪರ್ ಬರೆಯುವ ಹಂತಕ್ಕೆ ತಲುಪಿದುದು ಯೂರೋಪತನವನ್ನು ಭಾರತದಲ್ಲಿಳಿಸಬೇಕೆಂದು ಹೊರಟ ನೆಹರೂ ಹಟದಿಂದ.

‘ನಾನು ಮೆಚ್ಚುವುದು ತಾಜಮಹಲಿನ ಸ್ನಿಗ್ಧ ಸೌಂದರ್ಯವನ್ನು. ಭಾರತದ ದೇವಾಲಯಗಳಲ್ಲಿ ಕಾಣುವ ಕತ್ತಲು, ಕೊಳೆ, ಗಲೀಜುಗಳಿಲ್ಲದ ಶಾಂತ ವಾತಾವರಣವನ್ನು ಎನ್ನುವ ನೆಹರೂ; ಶಿಕ್ಷಿತ ವರ್ಗದಲ್ಲಿ ಭಾರತೀಯತೆಯ ಸಹಜ ಸ್ಫೂರ್ತಿಯನ್ನೂ ಪ್ರಕೃತಿ ಪರ ಪ್ರೇರಣೆಯನ್ನೂ ಅಷ್ಟೇಕೆ ಹಿಂದು ಮೂಲ ಪ್ರವೃತ್ತಿಯನ್ನೇ ಪರಕೀಯವಾಗಿಸುವುದರಲ್ಲಿ ಗೆಲುವು ಸಾಧಿಸಿದರು. ಏಷಿಯಾದಲ್ಲೇ ಎರಡನೆಯದೆನಿಸುವ ಸ್ಲಮ್ ಭಾರತದಲ್ಲಿದೆ. ಎನ್ನುವದರಲ್ಲಿ ಹೆಮ್ಮೆಯ ಸುಳಿವು ಕಾಣುವ ಮಾತನ್ನು ಶಿಕ್ಷಿತರು ಸಹಜವಾಗಿ ಆಡುವ ಹಂತಕ್ಕೆ ಇಳಿದರು. ಬಿಳಿಚರ್ಮದವರು ಬಂದು ಮತಾಂತರಿಸುವುದು ನಮ್ಮ ಪಾಲಿನ ಭಾಗ್ಯವೆಂದುಕೊಂಡುದ್ದೂ ಇದೇ ಪ್ರಭಾವದಿಂದ. ಸತಿ, ಬಾಲ್ಯವಿವಾಹದಂತಹ ಅತಿರೇಕಗಳು ನಡೆದುದು ಸಾಂದರ್ಭಿಕ ಕಾರಣಗಳಿಂದ ಎನ್ನುವುದರ ಬದಲು ಅದು ನಡೆದುದು ಹಿಂದು ಧರ್ಮದ ನ್ಯೂನತೆಯಿಂದ ಎಂದು ಸಾಬೀತು ಮಾಡಹೊರಟವರು ಇದೇ ವಿಚಾರವಂತರು. ಈ ಮೂಲಕ ಭಾರತದ ಚರಿತ್ರೆ ಮತ್ತು ಇತಿಹಾಸಗಳ ಬುನಾದಿಯನ್ನೇ ಅಪಭ್ರಂಶಗೊಳಿಸಿದವರು ಅವರಿಂದ ಪ್ರೋತ್ಸಾಹ ಗಳಿಸಿದ ಪ್ರಾಧ್ಯಾಪಕರು.

‘ಜವಹರಲಾಲ್ ನೆಹರೂ ಇದ್ದುದರಿಂದಲೇ ಸ್ವಾತಂತ್ರ್ಯದ ಹೊಸತರಲ್ಲಿ ಕಂಡು ಬಂದ ಎಲ್ಲಾ ಅಪಸವ್ಯಗಳನ್ನು ಪರಿಹರಿಸಲು ಸಾಧ್ಯವಾಯಿತು! ಸರ್ದಾರ್ ಪಟೇಲರಿಗೆ ನೆಹರೂರಲ್ಲಿದ್ದ ಚಾಕಚಕ್ಯತೆಯ ಅಭಾವವಿತ್ತು. ಹಾಗಾಗಿ ಭಾರತದ ಸ್ವಾತಂತ್ರ್ಯ ಮತ್ತು ಸಮಗ್ರತೆಯು ಉಳಿಯಿತು ಎನ್ನುವ ಪ್ರಮೇಯವನ್ನೂ ನೆಹರೂ ಭಕ್ತರೇ ನಿರ್ಣಯಿಸಿ ಅದನ್ನು ವ್ಯಾಪಕವಾಗಿ ಪ್ರಸರಿಸಿದರು’. ಕಾಶ್ಮೀರ, ಹೈದ್ರಾಬಾದ್, ಜುನಾಗಡ, ಸಂಸ್ಥಾನಗಳ ವಿಲೀನದಂತಹ ಅಸಾಧ್ಯಗಳನ್ನು ಸಾಧಿಸಿದ ಪಟೇಲ್ ಮತ್ತು ಎಲ್ಲವನ್ನು ಬಿಕ್ಕಟ್ಟಾಗಿಸಿದ ನೆಹರೂರನ್ನು ಹೋಲಿಸಿ ನಿರ್ಧರಿಸುವುದರಲ್ಲೂ ಸೋತುದು ಸ್ವಾತಂತ್ರ್ಯಾನಂತರದ ಶಿಕ್ಷಿತರ ಪ್ರಮಾದ.

ಈಗ ಭಾರತದಲ್ಲಿ ಚುನಾವಣೆ ನಡೆಯುತ್ತಿದೆ. ಕೆಂದ್ರಸರ್ಕಾರವೀಗ ಇಂಡಿಯಾದ ಹುಸಿ ಕಲ್ಪನೆಗಳನ್ನು ಬಿಟ್ಟು ಭಾರತವನ್ನು ಸ್ಥಾಪಿಸುವ ಸ್ಥಾಯೀ ನಿರ್ಧಾರಗಳನ್ನು ಕೈಗೊಳ್ಳಲಿದೆ.

ಹಿಂದುವಾಣಿಗೆ ಚಂದಾದಾರರಾಗಲು

ವಾರ್ಷಿಕ ಚಂದಾ ರೂ. 130/– ಅಥವಾ ದ್ವೈವಾರ್ಷಿಕ ಚಂದಾ ರೂ. 250/–ರ
ಎಂ.ಓ./ಡಿ.ಡಿ.ಗಳನ್ನು “ಹಿಂದುವಾಣಿ” ಹೆಸರಿನಲ್ಲಿ ಕಳುಹಿಸಬಹುದು
ಅಥವಾ
ಕರ್ನಾಟಕ ಬ್ಯಾಂಕ್, ಚಾಮರಾಜಪೇಟೆ ಶಾಖೆ, ಬೆಂಗಳೂರು.
ಖಾತೆ ಹೆಸರು : “ಹಿಂದುವಾಣಿ” A/c No: 0582500102391901ಕ್ಕೆ
ವರ್ಗಾಯಿಸಬಹುದು.
I.F.S.C Code : KARB0000058
ನಂತರ 9663881653 ಮೊಬೈಲಿಗೆ ಅಥವಾ ದೂರವಾಣಿ 080–26604641ಕ್ಕೆ
ಕರೆ ಮಾಡಿ ತಮ್ಮ ಪೂರ್ಣ ವಿಳಾಸವನ್ನು ತಿಳಿಸಬೇಕು.

# ಆಚಾರ್ಯ ಶಂಕರರು
## ಆದ್ಯರು ಮತ್ತು ಉತ್ತುಂಗರು

ಮಕ್ಕಳಿಲ್ಲದ ಶಿವಗುರು ಮತ್ತು ಆರ್ಯಾಂಬೆ ದಂಪತಿಗಳು ತಮಗೊಂದು ಮಗುವನ್ನು ನೀಡೆಂದು ಬೇಡುವುದು ಅವರ ದಿನನಿತ್ಯದ ಪ್ರಾರ್ಥನೆಯಾಗಿದ್ದಿತು. ಅದೊಂದು ದಿನ ಶಿವನೇ ಆರ್ಯಾಂಬೆಯ ಕನಸಿನಲ್ಲಿ ಬಂದನಂತೆ. ಅವನು ಆಕೆಗೊಂದು ಆಯ್ಕೆಯನ್ನು ನೀಡಿದನಂತೆ. ಬಹುಕಾಲ ಬದುಕುವ ಮೂರ್ಖ ಮಗನೊಬ್ಬ ಬೇಕೆ? ಅಥವಾ ಅಲ್ಪಾಯುಷಿಯಾದರೂ ಪ್ರತಿಭಾವಂತನಾದ ಮಗು ಬಂದರೆ ಸಾಕೇ? ಎಂದು. ಆರ್ಯಾಂಬೆ ಕೇಳಿದಳಂತೆ "ಎರಡನೆ ಆಯ್ಕೆಯನ್ನೇ ನೀಡು" ಎಂದು. ಹೀಗೆ ವೈಶಾಖ ಶುಕ್ಲ ಪಂಚಮಿಯಂದು ಭುವಿಗಿಳಿದವರು ಆಚಾರ್ಯ ಶಂಕರರು.

ಮೂರನೇ ವಯಸ್ಸಿನಲ್ಲೇ ಏಕಪಾಠಿಯಾಗಿ ಪ್ರಚಲಿತ ಸಂಸ್ಕೃತ ಶಾಸ್ತ್ರಗಳನ್ನು ಒಪ್ಪಿಸಬಲ್ಲ ಶಂಕರನು ತಾಯಿಯ ಕಣ್ಮಣಿಯಾದುದು ಸಹಜವೆ. ಆದರೆ ಹುಡುಗನು ಮುಂದೊಂದು ದಿನ ಸಂನ್ಯಾಸಿಯಾಗುವೆ ಎಂದರೆ, ತಾಯಿಯ ಕರುಳು ಹಿಂಡಿದಂತಾಗುವುದೂ 'ಸಹಜವೇ ಸರಿ. ಮಗುವಿಗೆ ಎಲ್ಲಿಂದ ಬಂತೋ ಏನೋ? ಆ ಸಂನ್ಯಾಸಿಯಾಗುವ ಆಸಕ್ತಿ? ಒಂದು ದಿನ ಪೂರ್ಣಾ ನದಿಯಲ್ಲಿ ಈಜಾಡುತ್ತಿದ್ದ ಮಗ ಶಂಕರ 'ಅಮ್ಮಾ' ಎಂದು ಕರೆದಾಗ, ತಾಯಿ ಅವನ ಕಡೆ ನೋಡಿದಳು. 'ಅಮ್ಮಾ ಮೊಸಳೆಯೊಂದು ನನ್ನ ಕಾಲುಗಳನ್ನು ಎಳೆಯುತ್ತಿದೆ. ನೀರಲ್ಲಿ ಮುಳುಗುವೆ ಅಥವಾ ಮೊಸಳೆಯ ಬಾಯಿಗೆ ಸಿಕ್ಕಿ ಸಾಯುವೆ. ಅದರ ಮೊದಲೊಮ್ಮೆ ನನ್ನ ಜೀವನದ ಒಂದೇ ಒಂದು ಆಸೆಯು ನೆರವೇರುವಂತೆ ಮಾಡುವೆಯಾ? ಸಂನ್ಯಾಸಿಯಾಗುವೆ ಎನ್ನುವುದನ್ನು ನೀನು ಒಪ್ಪಿದೆ ಎಂದರೆ ಸಾಕು. ಅಮ್ಮನ ಒಪ್ಪಿಗೆಯೇ ನನಗೆ ಸಿಗುವ ಸಂನ್ಯಾಸ ದೀಕ್ಷೆ ಎಂದುಕೊಳ್ಳುವೆ' ಎಂದು ಒಂದೇ ಸಮನೆ ಕೂಗಿ ಹೇಳಿದನು. ಆಲೋಚಿಸಲು ಅವಕಾಶವಿಲ್ಲದ ತಾಯಿ ಆರ್ಯಾಂಬೆ 'ಸರಿ ಮಗೂ' ಎಂದಳು. ಮೊಸಳೆ ಕಾಲನ್ನು ಬಿಟ್ಟಿತು. ಮಗ ದಡಕ್ಕೆ ಬಂದನು. ಆ ಮೊಸಳೆ ಎಂದರೆ ಜಗತ್ತಿನ ಸೆಳೆತವಾಗಿರಬಹುದೇ? ತಾಯಿಯ ಕೃಪೆಯಿದ್ದಲ್ಲಿ ಇಂತಹ ಹಲವು ಆಶಾಪಾಶಗಳು ಕಳೆದು ಹೋಗುತ್ತವೆ ಎನ್ನುವ ರೂಪಕವೇ ಈ ಪ್ರಸಂಗ? ಶ್ರೇಷ್ಠರ ಜೀವನದಲ್ಲಿ ಇಂತಹ ಹಲವು ಘಟನೆಗಳನ್ನು ನಡೆಯುತ್ತಿರುತ್ತವೇನೋ. ಆದರೆ ಕಾಲಟಿಯ ಪೂರ್ಣಾನದಿಯ ದಡದ ಶಂಕರರ ಮನೆಯ ಸ್ಮಾರಕವಿರುವಲ್ಲೇ ಮೊಸಳೆಗಳ ಘಟ್ಟವೊಂದು ಇರುವುದೂ ನಿಜವೆ.

ಸಂನ್ಯಾಸದ ಇಚ್ಛೆ ಬಲವತ್ತರವಾದಾಗ; ಒಬ್ಬಳೇ ಬಂಧುವಾದ ತಾಯಿಯ ಒಪ್ಪಿಗೆ ಬಂದಾಗ, ಇನ್ನೇನು ವಿಳಂಬ? ಶಂಕರ ಹೊರಟೇ ಬಿಟ್ಟ. ಆಗ ಆತನ ವಯಸ್ಸು ಒಂಬತ್ತು. ತಾಯಿಯ ಪ್ರೀತಿಯ ಸಂಕೋಲೆ, ಆಕೆಯ ಋಣದ ಭಾರವನ್ನು ಬಿಡಿಸುವುದು ಹೇಗೆ? ಇಳಿಸುವ ಪರಿ ಏನು? "ನಿನಗೆ ಎಂದು ನನ್ನ ಅಗತ್ಯವಿದೆಯೆನಿಸುವುದೋ ಆಗ ನಾನು ನಿನ್ನ ಬಳಿ ಇರುವೆ" ಎಂದರು, ಶಂಕರರು. ಅಷ್ಟೇ ಅಲ್ಲ ಸಂನ್ಯಾಸಶ್ರಮಕ್ಕೆ ವ್ಯತಿರಿಕ್ತವಾಗಬಹುದೆನಿಸಬಹುದೋ ಏನೋ? ಆದರೆ ತಮ್ಮ ತಾಯಿಗೆ "ನಿನ್ನ ಕೊನೆಯ

ಕಾಲದಲ್ಲಿ ನಾನು ನಿನ್ನ ಬಳಿ ಬರುವೆ. ನಿನ್ನ ಅಂತ್ಯ ಸಂಸ್ಕಾರವನ್ನು ಮಾಡುವೆ" ಎಂದರು. ತಾಯಿಗೆ ಅದು ಒಪ್ಪಿಗೆಯಾಯಿತು. ಎಂದಾಕ್ಷಣವೇ ಮರು ಆಲೋಚನೆಗೆ ಅವಕಾಶ ನೀಡದೆ ಹೊರಟೇ ಬಿಟ್ಟರು.

ದಕ್ಷಿಣದ ಪ್ರದೇಶ ದಾಟಿದ ಶಂಕರರು ಶೇಷನ ಏಳು ಹೆಡೆಗಳಂತೆ ಚಾಚಿದ ಸಾತ್ಪುರ ಘಟ್ಟಗಳ ಸಾಲನ್ನು ದಾಟಿ ನರ್ಮದೆಯ ತಟದ ಓಂಕಾರೇಶ್ವರವನ್ನು ತಲುಪಿದರು. ವಿಂಧ್ಯಾಪರ್ವತದ ಸಾನುಗಳು ಓಂಕಾರೇಶ್ವರವನ್ನು 'ಓಂ' ಆಕಾರದಲ್ಲಿ ಬಳಸುತ್ತವೆ. ಓಂಕಾರೇಶ್ವರವನ್ನು ಒಂದು ದಿಕ್ಕಿನಿಂದ ನರ್ಮದೆಯು ಹರಿದು ಬಂದರೆ ಇನ್ನೊಂದು ಬದಿಯಿಂದ ನರ್ಮದೆಯ ಉಪನದಿಯಾದ ರೇವಾನದಿಯು ಸುತ್ತಿ ಬರುತ್ತದೆ. ಹೀಗಾಗಿ ನರ್ಮದೆಯೂ ಇಲ್ಲಿ 'ಓಂ' ರೀತಿಯಲ್ಲೇ ಹರಿಯುತ್ತದೆ. ಓಂಕಾರೇಶ್ವರವು ಶಿವನಿಂದ ಸ್ಥಾಪಿತವಾದ ಲಿಂಗ. ಆದುದರಿಂದ ಅದು ಜ್ಯೋತಿರ್ಲಿಂಗವಾಗಿದೆ. ಶಂಕರರು ಅಲ್ಲಿಗೆ ಬಂದುದು ಓಂಕಾರೇಶ್ವರನ ದರ್ಶನಕ್ಕೆ ಮಾತ್ರವಲ್ಲ! ತನ್ನ ಗುರುವಿನ ಅನ್ವೇಷಣಕ್ಕಾಗಿ. ಅಲ್ಲಿ ಮಾಂಡುಕ್ಯ ಉಪನಿಷದನ್ನು ವ್ಯಾಖ್ಯಾನಿಸಿದ ಆಚಾರ್ಯ ಗೌಡಪಾದರ ಶಿಷ್ಯ ಗೋವಿಂದ ಭಗವತ್ಪಾದರು ಇರುವರೆಂದು ಶಂಕರರಿಗೆ ತಿಳಿದಿದ್ದಿತು.

ಶಂಕರರು ಅಲ್ಲಿ ಬಂದಾಗ ಗೋವಿಂದ ಭಗವತ್ಪಾದರು ಸಮಾಧಿ ಸ್ಥಿತಿಯಲ್ಲಿದ್ದರು. ಅವರಿದ್ದ ಗುಹೆಯ ಹೊರಗೆ ಹರಿಯುತ್ತಿದ್ದ ನರ್ಮದೆಯ ನೀರು ದಡವನ್ನು ಮೀರಿ ಹರಿಯುತ್ತಿದ್ದಿತು. ನರ್ಮದೆಯ ಪ್ರವಾಹವು ಗವಿಯೊಳಗೂ ನುಗ್ಗಿತು. ಇನ್ನೇನು ನೀರು ಗೋವಿಂದ ಭಗವತ್ಪಾದರನ್ನೂ ಆವರಿಸಿತು. ನೋಡುತ್ತಿದ್ದ ಶಂಕರರು ಪ್ರವಾಹದ ನೀರೆಲ್ಲವನ್ನು ತಮ್ಮ ಕಮಂಡಲುವಿನಲ್ಲಿ ತುಂಬಿಸಿ ಪ್ರವಾಹವನ್ನು ತಡೆದರು. ಅದೇ ಸಮಯದಲ್ಲಿ ಗೋವಿಂದ ಭಗವತ್ಪಾದರೂ ಕಣ್ಣು ತೆರೆದರು. ಎದುರು ನಿಂತವನು ಬಾಲಕ! ಸುಂದರ! ತೇಜಪುಂಜ! ಗುರುಗಳು ಕೇಳಿದರು. "ಯಾರು ಮಗೂ ನೀನು?." ಬಾಲಕ ಕೈಮುಗಿದು ಹೇಳಿದ.

**'ಮನೋ ಬುದ್ಧ್ಯಹಂಕಾರ ಚಿತ್ತಾನಿ ನಾಹಂ ನ ಚ ಶ್ರೋತ್ರ ಜಿಹ್ವೇ ನ ಚ ಘ್ರಾಣ ನೇತ್ರೇ। ನ ಚ ವ್ಯೋಮ ಭೂಮಿರ್ನತೇಜೋ ನ ವಾಯುಃ। ಚಿದಾನಂದ ರೂಪಃ ಶಿವೋಹಂ ಶಿವೋಹಂ॥**

ನಾನು ಎಂದರೆ ಏನೆನ್ನಬೇಕು ಗುರುವೇ? ಈ ಮನಸ್ಸೇ? ಈ ಬುದ್ಧಿಯೇ ಇದೆಲ್ಲವೂ ನಿರ್ಮಿಸುವ ಅಹಂಕಾರವೇ? ನಾನು ಎನಿಸುವಂತೆ, ಕೇಳುವ ಕಿವಿಗಳೇ? ಅಥವಾ ರುಚಿ ಹೇಳುವ ನಾಲಿಗೆಯೇ? ಮೂಗೇ? ಅಥವಾ ನೋಡುವ ಕಣ್ಣುಗಳು ನಾನೇ? ಇಲ್ಲ; ನಾನು ಆಕಾಶವಲ್ಲ ಮೆಟ್ಟುವ ಭೂಮಿಯಲ್ಲ. ಬೆಂಕಿಗಾಳಿಗಳಲ್ಲ ನಾನು ಶುದ್ಧ ಆನಂದ ಅನುಭವದ ಪ್ರಜ್ಞೆ, ನಾನು ಶುಭಂಕರನು. ನಾನು ಶಿವನು. ಗುರುವೇ ನಾನು ಆನಂದಕಾರಕ ಅನುಭವನು!

ಇನ್ನೇನು ಬೇಕು ಪರಿಚಯಕ್ಕೆ! ಗೋವಿಂದ ಭಗವತ್ಪಾದರು ಶಂಕರನನ್ನು ಭೂಮಿಯ ಶುಭಂಕರನನ್ನು ಜಗತ್ತು ಕಂಡ ಶಿವನನ್ನು ಹತ್ತಿರ ಕರೆದರು. ಅವನ ತಲೆಯನ್ನು ನೇವರಿಸಿದರು. ಶಂಕರರು ಮುಂದೆ ಗೋವಿಂದ ಭಗವತ್ಪಾದರನ್ನು ಬೀಳ್ಕೊಡುವಾಗ ಅದ್ವೈತದ ಸಾರ ಸರ್ವಸ್ವವನ್ನು ತನ್ನದಾಗಿಸಿಕೊಂಡಿದ್ದರು. ಅವರ ಜೀವ ಜಗತ್ತಿನ ಕರುಣೆ ಎಂತಹದು? ಆಗಾಗ ಪ್ರವಾಹದಿಂದ ಉಬ್ಬರಿಸುವ ನರ್ಮದೆಯಿಂದಾಗಿ ಓಂಕಾರೇಶ್ವರನ ಮಂದಿರವನ್ನು

ಮುಟ್ಟಲಾಗದವರಿಗಾಗಿ, ಶಂಕರರು ಮಾಮಲೇಶ್ವರ ದೇವಸ್ಥಾನವನ್ನು ನರ್ಮದೆಯ ತಟದಲ್ಲಿ ಕಟ್ಟಿದರು. ಓಂಕಾರೇಶ್ವರನ ಮಂದಿರದ ಪ್ರತಿರೂಪವಾಗಿರುವ ಮಾಮಲೇಶ್ವರನು ವಿಕಲ್ಪನೆನಿಸಿದರೆ ಓಂಕಾರೇಶ್ವರನು ಸಂಕಲ್ಪನಾಗಿಬಿಟ್ಟ. ನರ್ಮದೆಯಲ್ಲಿ ಸಿಗುವ ಪ್ರತಿಯೊಂದು ಕಲ್ಲೂ, ಪವಿತ್ರ ಶಿವಲಿಂಗವೆ. ಅಲ್ಲಿ ಬೀಸುವ ಗಾಳಿ ಶಿವನೆ. ಹರಿಯುವ ನೀರು ಆಚಾರ್ಯ ಶಂಕರರ ತಂಪು ಆಶಿಸ್ಸುಗಳೇ ಆಗಿ ಹೋದವು.

ಭಕ್ತರಿಗಾಗಿ ಮಾಮಲೇಶ್ವರನನ್ನು ತಂದ ಶಂಕರರು ಅದ್ವೈತವನ್ನು ರಕ್ಷಿಸಲು ಮತ್ತು ಪಸರಿಸಲು ಮಠಗಳ ಸ್ಥಾಪನೆಯಾಗಬೇಕೆಂದುಕೊಂಡುದು ಕೂಡಾ ಗೋವಿಂದ ಭಗವತ್ಪಾದರ ಮಠದಲ್ಲೇ.

ಓಂಕಾರೇಶ್ವರನು ಸ್ವಯಂಭೂಲಿಂಗನಾಗಿ ಇಲ್ಲಿ ಪ್ರಕಟನಾಗಿರುವನು. ಲಿಂಗದ ಹಿಂದೆ ಶಿವಾನಿ ಪಾರ್ವತಿಯ ವಿಗ್ರಹವಿದೆ. ಹನ್ನೆರಡು ಜ್ಯೋತಿರ್ಲಿಂಗಗಳಲ್ಲಿ ಇಲ್ಲಿ ಮಾತ್ರ ತಾಯಿ ಪಾರ್ವತಿಯು ಶಿವನ ಜೊತೆ ಇರುತ್ತಾಳೆ. ಅಖಂಡ ಜ್ಯೋತಿಯೊಂದು ಇಲ್ಲಿ ಬೆಳಗುತ್ತಲಿರುತ್ತದೆ. ರಾತ್ರಿ ಒಂಭತ್ತು ಗಂಟೆಗೆ ಶಯನಾರತಿಯು ಓಂಕಾರೇಶ್ವರನಿಗೆ ಬೆಳಗುತ್ತದೆ. ಆ ನಂತರ ಜಗತ್ತಿನ ತಂದೆ ತಾಯಿಯರಿಗಾಗಿ ಸುಂದರ ಉಯ್ಯಾಲೆಯೊಂದು ತೂಗುತ್ತಿರುತ್ತದೆ. ಅವರ ವಿಶ್ರಾಂತಿಯ ಕ್ರೀಡೆಗಾಗಿ ಚದುರಂಗದ ಚೌಕವನ್ನು ಅಲ್ಲಿ ಇಡಲಾಗುತ್ತದೆ. ಪ್ರಾತಃ ಕಾಲದ ಪೂಜೆಗೆ ಬರುವ ಅರ್ಚಕರು ಶಿವ ಪಾರ್ವತಿಯರು ಆಡಿಸಿದ ಚದುರಂಗದ ಕಾಯಿಗಳು ಸ್ಥಾನ ಬದಲಾಯಿಸಿರುವುದನ್ನು ನೋಡುತ್ತಾರೆ.

ಅಲ್ಲೇ ಕೆಲವು ಹೆಜ್ಜೆ ನಡೆದರೆ ಕಾಣುವ ಗುಹೆಯಲ್ಲೇ ಶಂಕರರು ಗೋವಿಂದ ಭಗವತ್ಪಾದರನ್ನು ಕಂಡಿದ್ದರು. ಒಳಗೆ ಕೃಷ್ಣ ಶಿಲೆಯಲ್ಲಿ ಕೆತ್ತಿದ ಶಂಕರರ ವಿಗ್ರಹವಿದೆ. ಶಂಕರರು ಓಂಕಾರೇಶ್ವರದಲ್ಲಿರುವಾಗ ತಾಯಿ ಕಾಳಿಯ ಆರಾಧನೆಯ ಮೂಲಕ ತಾಂತ್ರಿಕ ಸಿದ್ಧಿಯನ್ನು ಪಡೆದರೆನ್ನಲು ಗುಹೆಯೊಳಗೆ ತೀಕ್ಷ್ಣ ಕಣ್ಣುಗಳ ಕಾಳಿಯ ವಿಗ್ರಹವನ್ನು ಪ್ರತಿಷ್ಠಾಪಿಸಲಾಗಿದೆ.

ಅದ್ವೈತದ ಸರ್ವಸ್ವವನ್ನು ಅರಗಿಸಿಕೊಂಡ ಶಂಕರರು ಓಂಕಾರೇಶ್ವರದಿಂದ ಗುರುಗಳ ಅಪ್ಪಣೆ ಪಡೆದು ವಾರಣಾಸಿಗೆ ಹೊರಡುತ್ತಾರೆ. ವಾರಣಾಸಿಯಲ್ಲಿ ಬಹಳ ವರ್ಷ ಉಳಿದುಕೊಂಡ ಆಚಾರ್ಯರು ಅಲ್ಲಿ ಹಲವಾರು ಕೃತಿಗಳನ್ನು ರಚಿಸುತ್ತಾರೆ. ಬ್ರಹ್ಮಸೂತ್ರಗಳಿಗೆ ಭಾಷ್ಯವನ್ನು ಅವರು ಬರೆದುದು ವಾರಣಾಸಿಯಲ್ಲಿ. ಅದೇ ರೀತಿ ಭಗವದ್ಗೀತೆಗೂ, ಉಪನಿಷತ್ತುಗಳಿಗೂ ತಮ್ಮ ವ್ಯಾಖ್ಯಾನವನ್ನು ಬರೆದರು. ಹಿಂದು ಧರ್ಮದ ರಾಜಧಾನಿಯೆನಿಸಿದ ವಾರಣಾಸಿಯು ಹಲವು ಜ್ಞಾನಿಗಳ ಕೇಂದ್ರವಾಗಿದ್ದಿತು. ಹಲವು ಉನ್ನತ ಶಾಸ್ತ್ರಾರ್ಥಗಳು ವಾರಣಾಸಿಯಲ್ಲಿ ನಡೆಯುತ್ತಿದ್ದವು. ವಿದ್ವಾಂಸನೊಬ್ಬನು ತನ್ನ ಜ್ಞಾನವನ್ನು ಪರೀಕ್ಷಿಸಲು ವಾರಣಾಸಿಯ ವಿದ್ವತ್ ಕೇಂದ್ರದಲ್ಲಿ ಅದನ್ನು ಸಾಣೆ ಹಿಡಿಯಬೇಕಾಗಿದ್ದಿತು. ಅಲ್ಲಿ ಚರ್ಚೆ, ಸಂವಾದಗಳ ಶಾಸ್ತ್ರಾರ್ಥಗಳಲ್ಲಿ ಭಾಗವಹಿಸಿದ ಅನುಭವಿಯು ಮಾತ್ರ ಆಚಾರ್ಯನೆನೆಸುತ್ತಿದ್ದನು.

ಆಚಾರ್ಯ ಶಂಕರರು ಅತ್ಯುಚ್ಚ ಸತ್ಯವನ್ನು ಕಂಡರು. ಅರಿತರು. ಅದಕ್ಕಾಗಿ ಅಖಂಡ ಭಾರತವನ್ನು ಸುತ್ತಿದರು. ತಮ್ಮ ಮೂವತ್ತೆರಡು ವರ್ಷಗಳ ಉತ್ತುಂಗ ಬದುಕಿನಲ್ಲಿ ಹಿಂದುತ್ವಕ್ಕೆ ಸಂಘಟನಾ ರೂಪವನ್ನು ಕೊಟ್ಟರು. ಆಚಾರ್ಯ ಗೌಡಪಾದರ ಮತ್ತು ಗೋವಿಂದ ಭಗವತ್ಪಾದರ ಚಿಂತನೆಯ ಅನ್ವಯಿಕ ಸಾಧನೆಯನ್ನು ಸ್ಥಾಯಿಯಾಗಿಸಿದರು.

# ‘ವಂದೇ ಮಾತರಂ’

‘ವಂದೇ ಮಾತರಂ’ ಗೀತದ ಪ್ರಸ್ತಾಪ ಬಂದರೆ ಡಿ.ವಿ.ಜಿ ಆವೇಶಗೊಳ್ಳುತ್ತಿದ್ದರು. ತಮ್ಮ ಮಟ್ಟಿಗೆ ಅವರು ರಾಷ್ಟ್ರಗೀತೆಯಾಗಿ ವರ್ಷಗಳುದ್ದಕ್ಕೂ ಅದನ್ನೇ ಪುರಸ್ಕರಿಸಿದ್ದರು. 1912ಕ್ಕೆ ಮುಂಚೆಯೇ ಆ ಗೀತವನ್ನು ಅವರು ಸಂಸ್ಕೃತಕ್ಕೆ ತರ್ಜುಮೆ ಮಾಡಿದ್ದರು,

ಅದು ಹೀಗೆ:

**ವಂದೇ ಮಾತರಮಮಲಾಂ । ಸುಜಲಾಂ ಸುಫಲಾಂ ಸುಸಸ್ಯಸಂಪನ್ನಾಂ ॥**
**ಭರಣೀಂ ಭಾರತಧರಣೀಂ । ತ್ವಾಂ ರಿಪುಹರಣೀಂ ಸುತಾರ್ತಿಪರಿಹರಿಣೀಂ ॥**

**ವಂದೇ ಮಾತರಮಾರ್ಯಾ । ಮಖಿಲೇಡ್ಯಾಮಮಿತರತ್ನಕನಕಾಢ್ಯಾಂ ॥**
**ಶುಭ್ರಜ್ಯೋತ್ಸ್ನಾ–ಪುಲಕಿತ । ರಜನೀಂ ತ್ವಾಂ ಶ್ರೀಮತೀಂ ಚ ಪುಣ್ಯವತೀಂ ॥॥**

**ದೇಶಮಯೀಂ ಕೋಶಮಯೀಂ ।**
**ಕುಶಲಮಯೀಂ ಸುಖಮಯೀಂ ಪ್ರಮೋದಮಯೀಂ ॥**
**ಅಯಿ ಮಧುರಾಲಾಪಮಯೀಂ । ತ್ವಾಂ ವಂದೇ ಮಾತರಂ ಚ ಸುಗುಣಮಯೀಂ ॥**

**ಕರ್ಮ ತ್ವಂ ಮರ್ಮ ತ್ವಂ । ಸದ್ಧರ್ಮಸ್ತ್ವಂ ತಥೈವ ಶರ್ಮ ತ್ವಂ ॥**
**ಭರ್ಮ ತ್ವಂ ವರ್ಮ ತ್ವಂ । ತ್ವಾಂ ವಂದೇ ಮಾತರಂ ವಿದ್ಯಾಂ ॥**

**ಪ್ರಾಣಾಸ್ತ್ವಮೇವ ದೇಹೇ । ಭುಜಯೋಶ್ಶಕ್ತಿಸ್ತ್ವಮೇವ ದೇಹಭೃತಾಂ ॥**
**ಹೃದಯೇ ತ್ವಮೇವ ಭಕ್ತಿ । ಸ್ತ್ವಾಂ ವಂದೇ ಮಾತರಂ ದೇವೀಂ ॥**

1922ರಲ್ಲಿ ಪ್ರಕಟವಾದ ‘ವಸಂತ ಕುಸುಮಾಂಜಲಿ’ ಸಂಕಲನದಲ್ಲಿಯೂ ಈ ಸಂಸ್ಕೃತ ರೂಪಾಂತರವನ್ನು ಡಿ.ವಿ.ಜಿ. ಸೇರಿಸಿದ್ದರು. 1947ರಲ್ಲಿ ಭಾರತ ಸ್ವತಂತ್ರವಾದ ಸಂದರ್ಭದಲ್ಲಿ ಡಿ.ವಿ.ಜಿ.ಯವರು ಬರೆದ ‘ಸ್ವತಂತ್ರ ಭಾರತ ಅಭಿನಂದನಸ್ತವ’ ಪದ್ಯಮಾಲಿಕೆಯ ಪರಿಸಮಾಪ್ತಿಯ ಪದ್ಯದಲ್ಲಿಯೂ ಡಿ.ವಿ.ಜಿ. ‘ವಂದೇ ಮಾತರಂ’ ಗೀತವನ್ನು ಸ್ಮರಿಸದಿರಲಿಲ್ಲ:

**ವಂದೇ ಮಾತರಮೆಂದು ಪಾಡುಗೆ ಜನ ಬಾಯಿಂದಮೇಂ ಬಾಯೊಡಂ ।**
**ಸಂದಿರ್ಪಾವಗಮೆಲ್ಲ ಜೀವಕರಣಂ ಪಾಡಕ್ಕೆ ಕಾರ್ಯಸ್ಫುಟಂ ॥**
**ಮಾಂದ್ಯಂ ಪೋಗುಗೆ ಬುದ್ಧಿಯಂತ್ರಗಳಿನ್ ಆಂಧ್ಯಂ ನೀತಿನೇತ್ರಂಗಳಿಂ ।**
**ವಂದೇ ಮಾತರಮಸ್ತು ಭಾರತಿ ಶಿವಂ ಸರ್ವೋತ್ಸವಂ ಮಂಗಳಂ ॥**

ನಿಧನರಾಗುವುದಕ್ಕೆ (1975) ಮೂರು–ನಾಲ್ಕು ವರ್ಷ ಹಿಂದೆ ಡಿ.ವಿ.ಜಿ.ಯವರು ‘ವಂದೇ ಮಾತರಂ’ ಸಂಸ್ಕೃತ ರೂಪಕ್ಕೆ ಉಚಿತ ರಾಗ ಸಂಯೋಜನೆ ಮಾಡಿಕೊಡುವಂತೆ ವಿದ್ವಾನ್ ಎನ್. ಚೆನ್ನಕೇಶವಯ್ಯನವರನ್ನು ಕೋರಿದ್ದರು.

– ಎಸ್. ಆರ್ ರಾಮಸ್ವಾಮಿಯವರ ‘ದೀವಟಿಗೆಗಳು’ ಸಂಗ್ರಹದಿಂದ

*(ಕಳೆದ ಸಂಚಿಕೆಯಿಂದ)*

# ಮೊದಲ ನೌಕಾ ಸೇನಾಪತಿ ಕಾನ್ಹೋಜಿ ಆಂಗ್ರೆ

**– ಪ್ರಭಂಜನ ಸೂರ್ಯ, ಚಿತ್ರದುರ್ಗ**

ಒಂದು ದಿನ ನೋಡು ನೋಡುತ್ತಿದ್ದಂತೆ ಬೊಂಬಾಯಿಯ ಪ್ರವೇಶ ದ್ವಾರದಂತಿದ್ದ ಪಾನೆ ನದಿಯಲ್ಲಿ ಆಂಗ್ರೆಯ ಏಳು ಹಡಗುಗಳು ಬಂದು ಲಂಗರು ಹಾಕಿದವು. ಆ ಕಾರ್ಯಾಚರಣೆಯಲ್ಲಿ ಒಂದೇ ಒಂದು ಗುಂಡು ಹಾರಲಿಲ್ಲ. ಯಾವುದೇ ಉತ್ತರ ಪ್ರತ್ಯುತ್ತರಗಳ ಪತ್ರ ವ್ಯವಹಾರಗಳು ವಿನಿಮಯಗೊಳ್ಳಲಿಲ್ಲ. ಆ ಹಡಗಿನಲ್ಲಿದ್ದ ಆಂಗ್ರೆಯ ಉಪಸ್ಥಿತಿ ಮಾತ್ರವೇ ಆಂಗ್ಲರ ಬೊಂಬಾಯಿಗೆ ಇದ್ದ ಎಲ್ಲ ಸಂಪರ್ಕಗಳನ್ನು ಕಡಿದು ಹಾಕಿತು. ಅಲ್ಲಿಗೆ ಬಂದು ನಿರ್ಗಮಿಸುವ ಹಡಗುಗಳ ಸಂಚಾರವೇ ಪೂರ್ತಿಯಾಗಿ ನಿಂತುಹೋಯಿತು. ಮನಸ್ಸು ಮಾಡಿದರೆ ಆಂಗ್ಲರ ಪೂರ್ಣ ವ್ಯಾಪಾರ ವಹಿವಾಟುಗಳನ್ನು ಯುದ್ಧವಿಲ್ಲದೆ ತಡೆಯಬಲ್ಲನೆಂಬ ಭಯವನ್ನು ಆಂಗ್ರೆಯು ಈ ಪ್ರಸಂಗದ ಮೂಲಕ ಬಿತ್ತಿದನು. ಒಂದು ವಾರದ ನಂತರ ಯಾವುದೇ ಸೂಚನೆ ನೀಡದೆ ಆಂಗ್ರೆಯ ಹಡಗುಗಳು ಅಲ್ಲಿಂದ ನಿಷ್ಕ್ರಮಿಸಿದವು. ಅದಾಗುತ್ತಲೇ ಬೊಂಬಾಯಿ ಕೋಟೆಯ ವಿಲಿಯಂ ರೆನಾಲ್ಡ್‌ಗೆ ಈಸ್ಟ್ ಇಂಡಿಯಾ ಕಂಪನಿಯ ಭಾರತದ ಮೇಲಧಿಕಾರಿಯಿಂದ ಪತ್ರವೊಂದು ತಲುಪಿತು. ಇನ್ನು ಮುಂದೆ ಆಂಗ್ರೆಯನ್ನು ವಿರೋಧಿಸಿ ಯಾವುದೇ ಪತ್ರ ಬರೆಯಬಾರದು, ಮಾತುಗಳನ್ನಾಡಬಾರದು. ಅವನನ್ನು ಬೆದರಿಸುವ ಅಥವಾ ಅವಮಾನಿಸುವ ಯಾವುದೇ ಕೃತ್ಯಗಳು ನಡೆಯುವಂತಿಲ್ಲ. ಆಂಗ್ರೆಯ ಸುಪರ್ದಿಯಲ್ಲಿರುವ ನೌಕೆಗಳನ್ನು ಹಿಡಿದಿಡುವಂತಿಲ್ಲ ಅಥವಾ ಅವುಗಳನ್ನು ಶೋಧಿಸುವಂತಿಲ್ಲ. ಎನ್ನುವ ವಕ್ಕಣೆಯ ಎಚ್ಚರಿಕೆಯು ಆ ಪತ್ರದಲ್ಲಿದ್ದಿತು. ಅದಕ್ಕೆ ಆಂಗ್ರೆಯು ಆಂಗ್ಲರಿಗೆ ನೀಡಿದ ಎಚ್ಚರಿಕೆಯು ಕಾರಣವಾಗಿದ್ದಿತು. "ರಾಜಾ ಶಿವಾಜಿಯೊಂದಿಗೆ ಆಂಗ್ಲ ಕಂಪನಿಯು ಇಟ್ಟುಕೊಂಡಿರುವ ಸೌಹಾರ್ದತೆಯನ್ನು ಉಳಿಸಿಕೊಳ್ಳಬೇಕು ಎಂದಾದರೆ ಅಂತಹ ವರ್ತನೆಯನ್ನು ನಡೆದು ತೋರಿಸಿ ಎಂದು ಅವನು ಬರೆದಿದ್ದನು.

ಇತ್ತ ಮರಾಠಾ ರಾಜಾಸ್ಥಾನದಲ್ಲಿ ಹಲವು ಪಲ್ಲಟಗಳಾದವು. ಆ ನಡುವೆಯೂ ಬೊಂಬಾಯಿ ಮತ್ತು ಗೋವಾ ನಡುವಿನ ಕರಾವಳಿಯು ಪೂರ್ಣವಾಗಿ ಕಾನ್ಹೋಜಿಯ ವಶದಲ್ಲಿತ್ತು. ಹೊಸ ಐದು ನೌಕಾನೆಲೆಗಳನ್ನು ನಿರ್ಮಿಸಿದ ಆಂಗ್ರೆಯು ಹೊಸ ನೌಕೆಗಳ ನಿರ್ಮಾಣಕ್ಕೂ ಕೈಹಾಕಿದನು. ಅವನು ನೀಡುವ ಆಕರ್ಷಕ ವೇತನಕ್ಕಾಗಿ ಹಲವು ವಿದೇಶಿ ನಾವಿಕರೂ ಅವನಲ್ಲಿ ಉದ್ಯೋಗಿಗಳಾಗಿರಲು ಬಯಸುತ್ತಿದ್ದರು. ಅವನೀಗ 16 ರಿಂದ 30ರ ವರೆಗೆ ಫಿರಂಗಿಗಳನ್ನು ಸ್ಥಾಪಿಸಿದ 10 ಹಡಗುಗಳು ಸೇರಿದ ಸೈನ್ಯದ ಸೇನಾಪತಿಯಾದವನು. ಅದರೊಂದಿಗೆ 4ರಿಂದ10 ಫಿರಂಗಿಗಳೂ ಸೇರಿದ್ದ ಕಿರಿಯ ನೌಕೆಗಳೂ ಸೈನ್ಯದಲ್ಲಿ ಇದ್ದವು.

1703ರಲ್ಲಿ ಆಂಗ್ರೆಯು ಪೋರ್ಚುಗೀಸ್ ಗವರ್ನರನೊಬ್ಬನಿದ್ದ ಯುದ್ಧ ನೌಕೆಯನ್ನು ವಶಪಡಿಸಿಕೊಂಡನು. ಭಾರತದಲ್ಲಿ ತನ್ನ ಜೀವನಾವಧಿಯಲ್ಲಿ ಸಂಪಾದಿಸಿದ ಸಂಪತ್ತನ್ನು ಆತನು ಪೋರ್ಚುಗಲ್ಲಿಗೆ ಕೊಂಡೊಯ್ಯುವವನಿದ್ದನು. ಎದುರಿಸಲು ಬಂದ ಎರಡು



ನೌಕೆಗಳಲ್ಲಿ ಒಂದನ್ನು ಸುಟ್ಟು ಇನ್ನೊಂದನ್ನು ಆಂಗ್ರೆಯು ವಶಪಡಿಸಿಕೊಂಡನು. ಅದರಲ್ಲಿದ್ದ 20 ಪೋರ್ಚುಗೀಸ್ ಸೈನಿಕರನ್ನು ಬಂಧಿಸಿ ಅವರನ್ನು ಗಲ್ಲಿಗೇರಿಸಿದನು. 1712ರಲ್ಲಿ ಎರಡು ಯುದ್ಧನೌಕೆಗಳ ಭದ್ರತೆಯಲ್ಲಿ ಬರುತ್ತಿದ್ದ ಪೋರ್ಚುಗಿಸ್ ವಾಣಿಜ್ಯ ನೌಕೆಗಳನ್ನು ಆಕ್ರಮಿಸಿದನು. ಈ ಬೆಳವಣಿಗೆಯಿಂದ ಸಮುದ್ರ ವ್ಯಾಪಾರದ ಪಾಲುದಾರರಾಗಿದ್ದ ಪೋರ್ಚ್‌ಗೀಸ ಶ್ರೀಮಂತರು ದಿವಾಳಿ ಎದ್ದರು.

ಯುರೋಪಿನ ಸಮರ ನೌಕೆಗಳು ಮರಾಠಾ ಶಕ್ತಿಗೆ ಈಡಾಗಿರಲಿಲ್ಲ. ಅದಕ್ಕೆ ಉತ್ತರವಾಗಿ ಶಿವಾಜಿ ತಂತ್ರವು ಆಂಗ್ರೆಯ ಯುದ್ಧದ ನೀತಿಯಾಗಿದ್ದಿತು. ಬಿಳಿಯರ ಹಡಗುಗಳ ವೇಗವನ್ನು ಬೆನ್ನಟ್ಟಲು ಅಸಾಧ್ಯ. ಆದರೆ ಅವು ದಡಕ್ಕೆ ಬಂದು ಸೇರುವಾಗ ಸಹಜವಾಗಿ ಅವುಗಳ ವೇಗವು ಕಡಿಮೆಯಾಗುತ್ತಿತ್ತು. ಅದನ್ನೇ ಕಾಯುತ್ತಿದ್ದ ಆಂಗ್ರೆಯು, ಅವಿತಿದ್ದ ತನ್ನ ಸೈನಿಕರ ನಾವೆಗಳನ್ನು ಹೊರಡಿಸಿ ಆ ಭಾರಿ ಹಡಗುಗಳನ್ನು ಮುತ್ತಿ ಬಿಡುತ್ತಿದ್ದನು. ಅತಿ ಸಮೀಪದಲ್ಲಿರುವ ಶತ್ರುಗಳ ಮೇಲೆ ಫಿರಂಗಿಗಳ ಗುಂಡು ಹಾರಿಸಿದರೆ ಅದು ದೂರಕ್ಕೆ ಹೋಗಿ ಬೀಳುತ್ತಿದ್ದುವಲ್ಲದೆ, ಭಾರತೀಯ ಸೈನಿಕರಿಗೆ ತಗಲುತ್ತಿರಲಿಲ್ಲ. ಅಷ್ಟರೊಳಗೆ ಆಂಗ್ರೆಯ ಸೈನಿಕರು ಬಿಳಿಯರ ಹಡಗುಗಳನ್ನು ಪ್ರವೇಶಿಸಿ ತಾವು ಪರಿಣಿತರಾದ ಖಡ್ಗ ಯುದ್ಧದಲ್ಲಿ ಅವರನ್ನೆಲ್ಲ ಯಮಲೋಕಕ್ಕೆ ಕಳುಹಿಸಿ ಬಿಡುತ್ತಿದ್ದರು.

1706ರಲ್ಲಿ ಆಂಗ್ಲರ ಮೇಲೆ ಮುಗಿಬಿದ್ದ ಆಂಗ್ರೆಯು ಕಾರವಾರದಲ್ಲಿ ಅವರ 'ಮಾನ್ಸೂನ್' ಎನ್ನುವ ಹಡಗನ್ನು ಕೈವಶಮಾಡಿಕೊಂಡನು. 1707ರಲ್ಲಿ 'ಬಾಂಬೆ' ಎನ್ನುವ ಯುದ್ಧನೌಕೆಯನ್ನು ಮುಳುಗಿಸಿದನು. 1710ರಲ್ಲಿ ಕಂಪನಿಯ 'ಗೋಡಾಲ್ಫಿನ್' ಹಡಗನ್ನು ಎರಡು ದಿನಗಳ ಕಾದಾಟದ ನಂತರ ಬೊಂಬಾಯಿ ರೇವಿನ ಸಮೀಪ ವಶಪಡಿಸಿಕೊಂಡನು. 1712ರಲ್ಲಿ ಇನ್ನೆರಡು ಹಡಗುಗಳನ್ನು ಗೆದ್ದನು. ಅದರಲ್ಲೊಂದು ಗವರ್ನರನ ಖಾಸಗಿ ಸಶಸ್ತ್ರ ಪ್ರವಾಸಿ ನೌಕೆಯಾಗಿದ್ದಿತು. ಈ ಕಾರ್ಯಾಚರಣೆಯಲ್ಲಿ ಆಂಗ್ಲರ ರಕ್ಷಣಾ ನೌಕೆ 'ಡಿಫೈಯನ್ಸ್' ಎನ್ನುವ 14 ಫಿರಂಗಿಗಳ ಹಡಗು ಪಲಾಯನ ಮಾಡಿತು. ಮುಂದಿನ ತಿಂಗಳಲ್ಲಿ ಇಂಗ್ಲೆಡಿನಿಂದ

ಬರುತ್ತಿದ್ದ " ಗ್ರಾಂಟಮ್' ಮತ್ತು 'ಸೋಮರ್' ಹಡಗುಗಳನ್ನು ಆಂಗ್ರೆಯು ಆಕ್ರಮಿಸಿದನು. ಇದಾಗುತ್ತಲೆ ಆಂಗ್ರೆಯು ಏಕಪಕ್ಷೀಯವಾಗಿ ಯುದ್ಧ ವಿರಾಮವನ್ನು ಘೋಷಿಸಿದನು. ಮತ್ತು ಲಾಭದಾಯಕವಾದ ಒಪ್ಪಂದವನ್ನು ಮಾಡಿ ಆಂಗ್ಲರು ಬಹುಕಾಲ ಆ ಗಾಯದ ನೋವನ್ನು ಅನುಭವಿಸುವಂತೆ ಮಾಡಿದನು.

ಈಗಂತೂ ಪಶ್ಚಿಮದ ಕರಾವಳಿಯ ಒಪ್ಪಂದದಲ್ಲಿ ಕಾನ್ಹೋಜಿಯ ಚಕ್ರಾಧಿಪತ್ಯವೇ ನಡೆಯುವಂತಾಯಿತು. 1722ರಲ್ಲಿ ಹೊಸ ಉತ್ಸಾಹದಿಂದ ಹೊರಟ ಮರಾಠಾ ನೌಕೆಗಳು ರಾಜಾಪುರದ ಬಳಿ ಆಂಗ್ಲರ ಒಂದು ಹಡಗನ್ನು ಸುಟ್ಟು ಬಿಟ್ಟವು. ಉಳಿದವು ಪಲಾಯನ ಗೈದವು. ಇಂಗ್ಲೆಂಡಿನ ಇನ್ನೊಂದು ಹಡಗನ್ನು ಕಾನ್ಹೋಜಿ ವಶಪಡಿಸಿಕೊಂಡನು. ಅದರಲ್ಲಿ ನಾಣ್ಯಗಳೂ ಅತ್ಯಮೂಲ ಸರಂಜಾಮುಗಳು ಮರಾಠರ ಪಾಲಾದವು. ಗೆಲುವು ಶಾಂತಿಯನ್ನು ಸ್ಥಾಪಿಸುತ್ತದೆ. ಹೀಗೆ ತನ್ನ ಶಕ್ತಿಯನ್ನು ಪ್ರದರ್ಶಿಸಿದ ಆಂಗ್ರೆಯು 1725ರಲ್ಲಿ ವಿಶ್ರಾಂತಿಯನ್ನು ಬಯಸಿದನು. ಸದಾ ಯುದ್ಧರಂಗದಲ್ಲೇ ಕಾಲಕಳೆಯುತ್ತಿದ್ದ ಕಾನ್ಹೋಜಿ ಆಂಗ್ರೆಯು ಸತಾರಕ್ಕೆ ಹೋಗಿ ಮಹಾರಾಜ ಶಾಹುವಿನೊಡನೆ ಕೆಲವು ದಿನವಿರಲು ಬಯಸಿದನು. ಸದಾ ಅಂತಿಮ ಗೆಲುವನ್ನು ಪಡೆಯುತ್ತಿದ್ದ ಕಾನ್ಹೋಜಿ 1728ರ ಜೂನ್ 20ರಂದು ತನ್ನ ಕೊನೆಯುಸಿರನ್ನು ಎಳೆದನು.

ಇತಿಹಾಸಕಾರ ಸುರೇಂದ್ರನಾಥ ಸೇನ್, ಕಾನ್ಹೋಜಿಯನ್ನು ಮರಾಠಾ ನೌಕಾ ಸೈನ್ಯದ ಸ್ಥಾಪಕನೆಂದು ಪರಿಗಣಿಸುತ್ತಿದ್ದರು. ಸಮುದ್ರದಲ್ಲೂ ಮರಾಠಾ ಪ್ರತಿಷ್ಠೆಯನ್ನು ದೊರಕಿಸಿದವನೆಂದು ಅವರು ಅವನನ್ನು ಬಣ್ಣಿಸುತ್ತಿದ್ದರು. ಇಂಗ್ಲಿಷ್ ಪೋರ್ಚುಗೀಸ್ ಮತ್ತು ಸಿದ್ದಿಗಳ ಒಟ್ಟು ಶಕ್ತಿಯನ್ನು ಮಣಿಸಿದವನೆಂದೂ, ಯುದ್ಧದಲ್ಲೂ ಸಂಧಾನವೆರಡರಲ್ಲೂ ಅಪ್ರತಿಮ ತಂತ್ರಗಾರನೆಂದು ಅವರು ಕಾನ್ಹೋಜಿಯನ್ನು ವರ್ಣಿಸಿದ್ದರು.

## ಶಾಲೆ ಇರುವುದು ಓದಲು. ನಮಾಜು ಮಾಡಲು ಅಲ್ಲ



ಲಂಡನ್ನಿನ ಪ್ರಸಿದ್ಧ ಮೈಕೇಲಿಯಾ ಕಮ್ಯೂನಿಟಿ ಸ್ಕೂಲ್ ಶಾಲೆಯ ಒಳಗೆ; ಪ್ರಾರ್ಥನೆಯ ಸಂಪ್ರದಾಯವನ್ನು ನಿರ್ಬಂಧಿಸಿರುವುದರಿಂದ ತನ್ನ ಪ್ರಾರ್ಥನೆಯ ಹಕ್ಕಿನ ಬಗ್ಗೆ ತಾರತಮ್ಯವನ್ನು ಎಸಗಿದೆ ಎಂದು ಮುಸ್ಲಿಂ ವಿದ್ಯಾರ್ಥಿಯೊಬ್ಬಳು ನ್ಯಾಯಾಲಯವನ್ನು ಆಗ್ರಹಿಸಿದ್ದಳು. ತನ್ನ ಧಾರ್ಮಿಕ ಸ್ವಾತಂತ್ರ್ಯಕ್ಕೂ ಧಕ್ಕೆಯಾಗಿದೆ ಎಂದೂ, ತನ್ನ ಧರ್ಮವು ಧಾರ್ಮಿಕ ಆಚರಣೆಗೆ ನೀಡಿದ ಪ್ರಾಮುಖ್ಯತೆಯನ್ನು ಶಾಲೆಯು ನಿರ್ಬಂಧದ ಮೂಲಕ ಕಡೆಗಣಿಸಿದೆಯೆಂದೂ ಆಕೆ ನ್ಯಾಯಾಲಯವನ್ನು ಪ್ರಾರ್ಥಿಸಿದ್ದಳು. ಆದರೆ ನ್ಯಾಯಾಲಯವು ಆ ಎಲ್ಲ ದೂರುಗಳನ್ನು ತಳ್ಳಿಹಾಕಿ ಶಾಲೆಗಳಲ್ಲಿ ವಿದ್ಯಾರ್ಥಿಯು ತನಗಿಷ್ಟವಾದ ಧಾರ್ಮಿಕ ಆಚರಣೆಗಳನ್ನು ಆಚರಿಸುವಂತಿಲ್ಲವೆಂದು ತೀರ್ಪುನೀಡಿದೆ.

# 'ನಾನು ಅವರ ಹಿರೇಮಗ'

ಪ್ರೊ. ಟಿ. ಎಸ್. ವೆಂಕಣ್ಣಯ್ಯನವರ ತಂದೆ ಸುಬ್ಬಣ್ಣನವರು ದೊಡ್ಡ ಸಂಸಾರವಂದಿಗರು. ಸಂಸಾರದ ಖರ್ಚು ವೆಚ್ಚ ಜಾಸ್ತಿ. ಅವರಿಗೆ ಒಂದಿಷ್ಟು ನಿರಾಳವಾಗಲಿ ಎಂದು ಹಿರಿಯರೂ ಹಿತೈಷಿಗಳೂ ಆದ ಶಾನುಭೋಗ ಗೋವಿಂದಪ್ಪನವರು ಗೌಡರ ಗುರುಸಿದ್ಧಪ್ಪನೊಂದಿಗೆ ವಿಚಾರಮಾಡಿ, ಅವರ ಮೂಲಕ ಸೇಂದಿ ಕಂಟ್ರಾಕ್ಟರ್ ಮುನಿಯಪ್ಪನೊಂದಿಗೆ ಪಾಲುದಾರರಾಗಿ ಸೇರುವಂತೆ ಸುಬ್ಬಣ್ಣನವರನ್ನು ಒಪ್ಪಿಸಿದರು. ಒಂದು ವರ್ಷ ಇದಕ್ಕಿದ್ದಂತೆ ಪ್ಲೇಗು ಅಮರಿಕೊಂಡಿತು. ಜನ ಸಾಯತೊಡಗಿದರು. ಸೇಂದಿ ಅಂಗಡಿಗಳು ಮುಚ್ಚಿಹೋದುವು. ಸರ್ಕಾರಕ್ಕೆ ಹಣ ಕಟ್ಟುವುದು ಸಾಧ್ಯವಾಗದೆ, ಸಾವಿರಾರು ರೂಪಾಯಿ ಕಂದಾಯ ಬಾಕಿ ಉಳಿದುಕೊಂಡಿತು. ಸುಬ್ಬಣ್ಣನವರು ಸುಮಾರು ಮೂರು ಸಾವಿರ ರೂಪಾಯಿಗಳನ್ನು ಸರ್ಕಾರಕ್ಕೆ ಜಮೆ ಮಾಡಬೇಕಾಯಿತು. ಅಮಲ್ದಾರರು ಸುಬ್ಬಣ್ಣನವರನ್ನು ಕರೆಸಿ ಪರಿಸ್ಥಿತಿಯನ್ನು ವಿವರಿಸಿದರು. ಅವರಿಗೆ ದಿಕ್ಕು ತೋಚದಾಯಿತು. ಅದನ್ನು ಜಿಲ್ಲಾಧಿಕಾರಿಗಳಿಗೆ ಅರಿಕೆ ಮಾಡುವುದಾಗಿಯೂ ಅವರ ಪರವಾಗಿ ಯಾರಾದರೂ ಜಾಮೀನು ನಿಲ್ಲಬೇಕಾಗಿ ಬರುವುದಾಗಿಯೂ ಅಮಲ್ದಾರರು ವಿವರಿಸಿದರು. ತಳುಕಿನಲ್ಲಿ ಮುಂದಿನ 15 ದಿನಗಳಿಗೆ ಜಮಾಬಂದಿ ಇಟ್ಟುಕೊಳ್ಳುವ ವೇಳೆಗೆ ಅದರ ಏರ್ಪಾಟು ಆಗಬೇಕೆಂದು ಸೂಚಿಸಲಾಯಿತು.

ಈಗ ಸುಬ್ಬಣ್ಣ ತಮಗೆ ಜಾಮೀನು ನಿಲ್ಲುವವರು ಯಾರು ಎಂಬ ಚಿಂತೆಗೆ ಒಳಗಾದರು. ಮನ್ನೆಕೋಟೆಯ ಶಾನಭೋಗ ರಾಮಣ್ಣನು ಸುಬ್ಬಣ್ಣನವರ ಜ್ಞಾತಿ. ಆತ ಸುಬ್ಬಣ್ಣನವರ ಕೀರ್ತಿ ಪ್ರತಿಷ್ಠೆಗಳಿಗೆ ಕರುಬುತ್ತಿದ್ದವನು. ಈ ಸಂದರ್ಭ ಬಳಸಿಕೊಂಡು ಅವರನ್ನು ಇಕ್ಕಟ್ಟಿಗೆ ಸಿಕ್ಕಿಸಿ ಹೇಗಾದರೂ ಅವರ ಮನೆ ಜಪ್ತಿಗೆ ಬರುವಂತೆ ಮಾಡಬೇಕೆಂದು ಆತ ಯೋಚಿಸಿದನು. ಏನೂ ತಿಳಿಯದವನಂತೆ ಅವರಲ್ಲಿಗೆ ಬಂದು, ಅವರ ಕಷ್ಟಸುಖಗಳಲ್ಲಿ ತಲೆ ಕೊಡುವುದು ತನ್ನ ಕರ್ತವ್ಯವೆಂದು ಕಪಟನಾಟಕ ಆಡಿದನು. ಜಮಾಬಂದಿಯ ದಿನ ತಾನು ಬಂಗಲೆಯ ಬಳಿ ಹಾಜರಿದ್ದು, ಜಾಮೀನು ಕೊಡುವುದಾಗಿ ತಿಳಿಸಿದನು. ಸರಳ ಸ್ವಭಾವದ ಸುಬ್ಬಣ್ಣನವರು ಅದನ್ನು ನಂಬಿದರು.

ಜಮಾಬಂದಿಯ ದಿನ, ಪಟೇಲರು ಮೊದಲಾಗಿ ಸರ್ಕಾರದ ಜನ, ಗ್ರಾಮಸ್ಥರು ಬಂಗಲೆ ಹತ್ತಿರ ಜಮಾಯಿಸಿದರು. ಸುಬ್ಬಣ್ಣನವರೂ ಬಂದರು. ರಾಮಣ್ಣನಿಗಾಗಿ ಹುಡುಕಾಡಿದರು, ಕಾದರು. ಅನಾರೋಗ್ಯದ ನೆಪ ಹೇಳಿ ಆತ ಬೇಕೆಂದೇ ಬಂದಿರಲಿಲ್ಲ. ಸುಬ್ಬಣ್ಣ ನಿರಾಸೆ ಅವಮಾನಗಳಿಂದ ಯಾರಿಗೂ ಹೇಳದೆ ಮನೆಗೆ ಬಂದುಬಿಟ್ಟರು. ಯಾರೂ ತಮ್ಮ ಪರ ಜಾಮೀನು ನಿಲ್ಲಲಿಲ್ಲ ಎಂದರೆ, ತಮ್ಮ ಮನೆ ಜಪ್ತಿಯಾಗುವುದು ಖಂಡಿತ ಎಂದು ಅದಕ್ಕೆ ಈಗ ಅವರು ಸಿದ್ಧರಾದರು. ಇಷ್ಟದೈವ ಶ್ರೀರಾಮಚಂದ್ರನನ್ನು ನೆನೆದು, ಪಾರಾಯಣದ ಪುಸ್ತಕ ರಾಮಾಯಣವನ್ನು ದೇವರ ಪೀಠದ ಮುಂದಿಟ್ಟುಕೊಂಡು ಕುಳಿತರು.

ಜಮಾಬಂದಿಯ ವೇಳೆ ಸುಬ್ಬಣ್ಣನವರ ಹೆಸರು ಕರೆದಾಗ, ಅವರು ಅಲ್ಲಿ ಇರಲಿಲ್ಲ. ತಾನೆ? ಸುತ್ತ ಗುಸುಗುಸು ಮೊದಲಾಯಿತು. “ಸುಬ್ಬಣ್ಣ ಸರ್ಕಾರಕ್ಕೆ ಹಣ ಕಟ್ಟಿಲ್ಲ”, “ಮನೆ

ಜಪ್ತಿಗೆ ಬಂದಿದೆ" ಎಂದು ಮುಂತಾಗಿ ಮಾತು ಹೊರಟಿತು. ಅಲ್ಲಿ ಸೇರಿದ್ದವರಲ್ಲಿ ಹೊಸಹಳ್ಳಿ ಗೊಲ್ಲರ ಕರಡಪ್ಪ ಸಹ ಇದ್ದ. ಆತನಿಗೇನೋ ಅಲ್ಲಿ ಕೆಲಸವಿತ್ತು. ಆತ ಈ ಗುಸಗುಸ ಮಾತು ಕಥೆಗಳನ್ನು ಕೇಳಿದವನೇ "ಏನು ಸಮಾಚಾರ' ಎಂದು ಅವರಿವರನ್ನು ವಿಚಾರಿಸಿದ. ಕೊಂಚ ವಿಷಯ ತಿಳಿಯಿತು. ತಾನೇ ಅಮಲ್ದಾರರ ಎದುರಿಗೆ ಹೋಗಿ ಕಾಣಿಸಿಕೊಂಡ.

ಚಡ್ಡಿ, ಹೆಗಲ ಮೇಲೆ ಕರಿಯ ಕಂಬಳಿ, ತಲೆಪಾಗು ಧರಿಸಿದ್ದ ಆತನನ್ನು ನೋಡಿ ಅಮಲ್ದಾರರು "ಏನಪ್ಪ ಅಹವಾಲು?" ಎಂದು ಕೇಳಿದರು. "ನನ್ನದೇನೂ ಅಹವಾಲು ಇಲ್ಲ ಸ್ವಾಮಿ, ಏನೋ ವರ್ತಮಾನ ಕಿವಿಗೆ ಬಿತ್ತು. ನಮ್ಮ ಸುಬ್ಬಣ್ಣನವರು ಏನೋ ಸರ್ಕಾರಕ್ಕೆ ದುಡ್ಡು ಕಟ್ಟಬೇಕಂತೆ. ಅದಕ್ಕೆ ಜಾಮೀನು ಕೊಡಬೇಕು ಎಂದು ಯಾರೋ ಅಂದರು. ಅದು ಹಾಗಿದ್ದರೆ, ಜಾಮೀನಾಗೋಣ ಅಂತ ಬಂದಿದೇನೆ" ಎಂದ ಕರಡಪ್ಪ. ಅವನ ವೇಷಭೂಷಣ ನೋಡಿ, ಅವನಿಗೆ ಇದು ಸಾಧ್ಯವೇ ಎಂದು ಅಮಲ್ದಾರರು ಅನುಮಾನಪಟ್ಟರು.

**ಅಮಲ್ದಾರ್:** ಏನಪ್ಪ, ಸುಬ್ಬಣ್ಣನವರು ಸರ್ಕಾರಕ್ಕೆ ಕಟ್ಟಬೇಕಾದ ಹಣ ಎಷ್ಟು ಗೊತ್ತೇ?
**ಕರಡಪ್ಪ:** ನಾನೇನು ಬಲ್ಲೆ ಮಹಾಸ್ವಾಮಿ, ಖಾವಂದರು ಹೇಳಿದರೆ ತಿಳಿಯುತ್ತೆ.
**ಅಮಲ್ದಾರ್:** ಸುಮಾರು ಮೂರು ಸಾವಿರ ರೂಪಾಯಿ ಕಟ್ಟಬೇಕು.
**ಕರಡಪ್ಪ:** ಇರಬಹುದು ಮಹಾಸ್ವಾಮಿ
**ಅಮಲ್ದಾರ್:** ಮತ್ತೆ ನಿನ್ನಂಥವನು ಅಷ್ಟು ಹಣಕ್ಕೆ ಜಾಮೀನಾಗಲು ಸಾಧ್ಯವೇ?
**ಕರಡಪ್ಪ:** ಮಹಾಸ್ವಾಮಿ, ನನಗೆ ಹಳ್ಳೀಲಿ ಒಂದು ಮನೆ, ಐವತ್ತೆಕರೆ ತರಿ ಜಮೀನು, ನೂರೆಕರೆ ಖುಷ್ಕಿ, ಎರಡು ಸಲಿಗೆ ದನ (1 ಸಲಿಗೆಯೆಂದರೆ 50), ಹತ್ತು ಸಲಿಗೆ ಕುರಿ ಇಷ್ಟು ಆಸ್ತಿ ಇದೆ. ಈ ಆಸ್ತಿ ಮೂರು ಸಾವಿರ ಬಾಳೋದಾದರೆ, ಖಾವಂದರು ನನ್ನ ಜಾಮೀನು ಒಪ್ಪಿಕೋಬೇಕು.

ಪಕ್ಕದಲ್ಲಿದ್ದ ಪಟೇಲರು ಅಮಲ್ದಾರರನ್ನು ಕುರಿತು "ಈತ ಹೇಳುವುದು ನಿಜ, ಸ್ವಾಮಿ. ಈ ಪ್ರಾಂತ್ಯದ ದೊಡ್ಡರೈತರಲ್ಲಿ ಈತನೂ ಒಬ್ಬ. ಸರ್ಕಾರಕ್ಕೆ ಮುನ್ನೂರು ರೂಪಾಯಿ ಕಂದಾಯ ಕಟ್ತಾನೆ" ಎಂದು ಹೇಳಿ, ಕರಡಪ್ಪನ ಸಾಮರ್ಥ್ಯವನ್ನು ಸಮರ್ಥಿಸಿದರು. ಅಮಲ್ದಾರರಿಗೆ ಕರಡಪ್ಪನನ್ನು ಸ್ವಲ್ಪ ತಮಾಷೆ ಮಾಡಬೇಕೆನ್ನಿಸಿತು. ಹೇಳಿದರು: "ಅದೆಲ್ಲಾ ಸರಿ, ನಿನ್ನ ಜಾಮೀನು ಒಪ್ಪಿಕೋಬಹುದು. ಆದರೆ ಇಷ್ಟು ಹಣಕ್ಕೆ ಜಾಮೀನು ಆಗುವುದಕ್ಕೆ ನೀ ಏನಾಗಬೇಕು, ಸುಬ್ಬಣ್ಣನವರಿಗೆ ? ಒಂದು ವೇಳೆ ಅವರು ಹಣ ಕಟ್ಟದಿದ್ದರೆ, ನಿನ್ನ ಆಸ್ತಿಯೆಲ್ಲ ಜಪ್ತಿಯಾಗುತ್ತದಲ್ಲಯ್ಯಾ, ಅದನ್ನು ನೀನು ಯೋಚಿಸಿದ್ದೀಯಾ?"


ಕರಡಪ್ಪ ಉತ್ತರ ಹೇಳಿದ: "ಜಾಮೀನಾಗೋದಕ್ಕೆ ಸಂಬಂಧವೇ ಆಗಬೇಕಾ ಸ್ವಾಮಿ? ಹಂಗೂ ಅಗಬೇಕು ಅಂದರೆ, ನಾನು ಅವರ ಹಿರೇಮಗ, ಅವರು ನನಗೆ ತಂದೆ, ದೇವರು, ತಂದೆಯ ಸಾಲ ಮಗ ತೀರಿಸಬೇಕಾದ್ದು ನ್ಯಾಯ ತಾನೇ? ನಾನು ಎಲ್ಲ ಯೋಚನೆ ಮಾಡಿಯೇ ತಮ್ಮ ಹತ್ತಿರ ಬಂದಿದ್ದೇನೆ."

ಅಮಲ್ದಾರರಿಗೆ ಆಶ್ಚರ್ಯವಾಯಿತು. ಮರುಮಾತಾಡದೆ, ಕರಡಪ್ಪನ ಜಾಮೀನು ಒಪ್ಪಿಕೊಂಡರು. ಕಾಗದ ಪತ್ರಗಳಿಗೆ ಅವನ ಹೆಬ್ಬೆಟ್ಟು ಗುರುತು ಹಾಕಿಸಿಕೊಂಡರು.

– ತ.ಸು. ಶಾಮರಾಯರ 'ಮೂರುತಲೆಮಾರು' ಕೃತಿಯಿಂದ

# ಸೋಲನ್ನೇ ಕಾಣದ ರಾಜ ಶ್ರೀಕೃಷ್ಣದೇವರಾಯ


– ಶತಾವಧಾನಿ ಆರ್. ಗಣೇಶ್



ವಿಜಯನಗರದ ಮತ್ತೊಬ್ಬ ಸಮರ್ಥನಾಯಕನೇ ಕೃಷ್ಣದೇವರಾಯ. ಗಂಗರಾಜರ ಮೇಲೆ, ಗಜಪತಿಗಳ ಮೇಲೆ, ಬಹಮನಿಯವರ ಮೇಲೆ ಮಾಡಿದ ಯಾವ ಯುದ್ಧಗಳಲ್ಲಿಯೂ ಇವನು ಸೋತಿಲ್ಲ. ಕೊನೆಗಾಲದಲ್ಲಿ ಕೂಡ ದೇವರಾಯನ ಹೆಸರು ಕೇಳಿದರೆ ಸಾಕು, ಶತ್ರುಗಳ ಎದೆ ನಡುಗುತ್ತಿತ್ತು. ಇವನು ಅಳಿದ ಬಳಿಕವೂ ಈತನ ಬಗೆಗೆ ಶತ್ರುಗಳು ಅಂಜುತ್ತಿದ್ದರು. ಅಲ್ಲಸಾನಿ ಪೆದ್ದನನು ಒಂದು ಚಾಟುಪದ್ಯದಲ್ಲಿ ಬರೆದಂತೆ, ಕೃಷ್ಣದೇವರಾಯ ತೀ–ರಿಕೊಂಡ ಹೊಸದರಲ್ಲಿ ದಾಳಿಮಾಡಿದ ಬಹಮನಿಯವರು, ವಿಜಯನಗರದವರ ಕೆರಳಿಕೆಯ ಹೂಂಕಾರಕ್ಕೇ ಹೆದರಿ ದೂರ ಹೋಗಿದ್ದರು.

ಕೃಷ್ಣದೇವರಾಯನು ಅಲ್ಪಕಾಲದಲ್ಲಿ ಅನಲ್ಪಸಾಧನೆಯನ್ನು ಮಾಡಿದನು. ಅನೇಕಕಾಲ ಯುದ್ಧಗಳಲ್ಲಿ ತೊಡಗಿದನು. ಇವನು ಒಂದು ಯುದ್ಧದಲ್ಲಿಯೂ ಸೋತದ್ದಿಲ್ಲ. ರಾಯಚೂರಿನ ಯುದ್ಧದಲ್ಲಿ ಬಹಮನಿಯ ಅರಸರನ್ನು ಸೋಲಿಸಿದನು. ಇವನ ಪರಾಕ್ರಮಕ್ಕೆ ಸ್ವಮತೀಯರೂ ವಿಮತೀಯರೂ ಆದ ಎಲ್ಲ ಶತ್ರುಗಳೂ ಅಂಜಿದ್ದರು. ಪೋರ್ಚುಗೀಸರೊಡನೆ ಯುದ್ಧಾಶ್ವಗಳಿಗಾಗಿ ಯುದ್ಧಸಾಮಗ್ರಿಗಳಿಗಾಗಿ ವಾಣಿಜ್ಯ ವ್ಯವಹಾರಗಳನ್ನಿಟ್ಟುಕೊಂಡಿದ್ದ ಕೃಷ್ಣದೇವರಾಯನು ಅದೇಕೋ ತನ್ನ ನಾಡಿನಲ್ಲಿ ಇಂಥವುಗಳ ಉತ್ಪತ್ತಿಗೆ ಯತ್ನಿಸಿದಂತಿಲ್ಲ. ಆದರೂ ಅದ್ಭುತವಾದ ಸಂಘಟನೆ, ಶಿಸ್ತು ಮತ್ತು ಆಧುನಿಕ ಯುದ್ಧತಂತ್ರಗಳ ಫಲವಾಗಿ ಕೃಷ್ಣದೇವರಾಯನ ಕ್ಷಾತ್ರವೂ ತಿಮ್ಮರಸನ ಬ್ರಾಹ್ಮವೂ ಸಿದ್ಧಿಯನ್ನು ಕಂಡಿದ್ದವು. ಒಮ್ಮೆಯಂತೂ ಯುದ್ಧಕ್ಕೆ ಹೋದವನು ಹಿಂದಿರುಗಿ ಬಂದದ್ದು ನಾಲ್ಕುವರ್ಷಗಳ ಬಳಿಕ. ಪೋರ್ಚುಗೀಸ್ ಪ್ರವಾಸಿ ನ್ಯೂನಿಜನು ಕೃಷ್ಣದೇವರಾಯನ ರಾಯಚೂರು ವಿಜಯಯಾತ್ರೆಯನ್ನು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾನೆ. ರಾಯನು ತನ್ನ ಶತ್ರುವಿನ ಕೋಟೆಯನ್ನು ಗೆದ್ದಾಗಲೂ ಕೇವಲ ಸೈನ್ಯಕ್ಕಾಗಿ ಬೇಕಿದ್ದ ಉರುವಲಿಗೆಂದು ಕೆಲವು ದೂಲ–ತೊಲೆಗಳನ್ನು ಸೆಳೆದೊಯ್ಯಬೇಕಾಯಿತಲ್ಲದೆ–ಅದೂ ಸ್ಥಳೀಯರು ಸಹಕರಿಸದ–ಕಾರಣ ಮತ್ತಾವ ಪೌರರಿಗೂ ಯುದ್ಧಕಾಲದಲ್ಲಿ ಯಾವುದೇ ಸಾವು–ನೋವು ನಷ್ಟಗಳಾಗದೆ ನೆಮ್ಮದಿ ನೆಲಸಿತೆಂದು ನ್ಯೂನಿಜ್ ದಾಖಲಿಸಿದ್ದಾನೆ. ಇದು ಕೃಷ್ಣರಾಯನ ಉದಾರತೆಗೂ

ಭಾರತೀಯ ಕ್ಷಾತ್ರಪರಂಪರೆಯ ಧರ್ಮದೀಪ್ತಿಗೂ ಒಂದು ಸುಂದರಸಾಕ್ಷಿ. ಅದೇ ಅಕ್ಬರನಂಥ 'ಅತ್ಯಂತ ಸುಸಂಸ್ಕೃತ–ಸಂವೇದನಶೀಲ' ಮುಸ್ಲಿಮ್ ದೊರೆಯು ಚಿತ್ತೋಡವನ್ನು ಗೆದ್ದಾಗ ಇಡಿಯ ನಗರವನ್ನೇ ದೋಚಿ, ಸುಟ್ಟು, ಜನಸಾಮಾನ್ಯರ ಬರ್ಬರ ಹತ್ಯಾಕಾಂಡವನ್ನು ನಡೆಸಿದ್ದನ್ನು ಅವನ ಆಸ್ಥಾನಕವಿ ಅಬುಲ್ ಫಜಲ ಹೆಮ್ಮೆಯಿಂದ ದಾಖಲಿಸಿದ್ದಾನೆ. ಇಂಥ ಹಿಂದೂ–ಮುಸ್ಲಿಮ್ ಕ್ಷಾತ್ರಲೋಕದ ತೌಲನಿಕಾಧ್ಯಯನ ಮತ್ತೆಷ್ಟೋ ಉಂಟು; ಇನ್ನೆಷ್ಟೋ ನಡೆಯಬೇಕಿದೆ. ಇದಿದ್ದೂ ಅಕ್ಬರನು 'ದ ಗ್ರೇಟ್' ಎನಿಸಿದ; ಕೃಷ್ಣದೇವರಾಯನು ಹಾಗೆ ಕೀರ್ತಿತನಾಗಲಿಲ್ಲ. ಇತಿಹಾಸದ ವಿಪರ್ಯಾಸ ಯಾವ ಪರಿಯದು!



ಇವನಿಗಿದ್ದ ದೌರ್ಬಲ್ಯವೆಂದರೆ ಪುತ್ರವ್ಯಾಮೋಹ, ಈಚಿನ ಸಂಶೋಧನೆಗಳು ಇದರ ಮೇಲೆ ಸಾಕಷ್ಟು ಬೆಳಕು ಚೆಲ್ಲಿವೆ. ಕೃಷ್ಣದೇವರಾಯನ ಬಗೆಗೆ ತಳಸ್ಪರ್ಶಿಯಾದ ಅಧ್ಯಯನ ಮಾಡಿದ ಡಾ. ಗೋಪಾಲಕೃಷ್ಣರವರು ಕೊಡುವ ಮಾಹಿತಿಯಂತೆ ಈತನ ಮಗ ತಿರುಮಲರಾಯನು ಅವಧಿಗೆ ಮುನ್ನವೇ ಹುಟ್ಟಿದ ಮಗು. ಅಕಾಲದಲ್ಲಿಯೇ – ಎಂದರೆ ಚಿಕ್ಕವಯಸ್ಸಿನಲ್ಲಿಯೇ – ಇವನಿಗೆ ಪಟ್ಟಾಭಿಷೇಕವಾಯಿತು. ತಿಮ್ಮರಸು ವಿಷಪ್ರಯೋಗ ಮಾಡಿದನೆಂಬ ವದಂತಿಗಳಿದ್ದರೂ ಅದು ಸುಳ್ಳು. ಇವನಿಗೆ ಬಂದುದು ಸಹಜವಾದ ಸಾವು. ಮಗನ ಸಾವಿನ ಬಳಿಕ ಅವನಿಗೆ ಬದುಕಿನಲ್ಲಿ ಹೆಚ್ಚಿನ ಉತ್ಸಾಹ ಉಳಿಯಲಿಲ್ಲ. ತಿಮ್ಮರಸನ ಅಭಿಪ್ರಾಯದಂತೆ, 'ಸಿಂಹಾಸನದಲ್ಲಿ ಸರ್ವದಾ ಸಮರ್ಥನಾದ ರಾಜನಿರಬೇಕು; ಅವನ ರಕ್ತ ಅರ್ಥಾತ್ ವಂಶೀಯತೆಯು ಮುಖ್ಯವಲ್ಲ. ಆದರೆ ರಾಜರಿಗೆ ತಮ್ಮ ರಕ್ತದವನೇ ರಾಜನಾಗಬೇಕೆಂಬ ವ್ಯಾಮೋಹವಿರುತ್ತದೆ. ಇಲ್ಲಿಯೇ ನಾವು ಕೇವಲ ಜನ್ಮಮಾತ್ರದ ಕ್ಷಾತ್ರಕ್ಕೂ ಗುಣಕರ್ಮಪರಿಪುಷ್ಟವಾದ ಕ್ಷಾತ್ರಕ್ಕೂ ಇರುವ ಅಂತರವನ್ನು ಕಾಣುತ್ತೇವೆ.

ಕೃಷ್ಣದೇವರಾಯನು ತನ್ನ 'ಅಮುಕ್ತಮಾಲ್ಯದ'ದಲ್ಲಿ ಒಂದು ಕಡೆ ಬರೆಯುತ್ತಾನೆ: 'ಎಂದಿಗೂ ಸಹ ಮಂತ್ರಿ ಅಥವಾ ಸೇನಾಧಿಪತಿಗಳ ಸ್ಥಾನದಲ್ಲಿ ಅಪ್ಪಟ ಕ್ಷತ್ರಿಯರಿರಬಾರದು, ಹಾಗೇನಾದರೂ ಇದ್ದರೆ, ಎಂದಾದರೂ ಒಂದು ದಿನ ಅವರು ರಾಜನನ್ನೇ ಪಕ್ಕಕ್ಕೆ ತಳ್ಳಿ ಅಧಿಕಾರಕ್ಕೆ ಬರಬಹುದಾದ ಸಂಭವವಿರುತ್ತದೆ'. ಕೃಷ್ಣದೇವರಾಯನ ಈ ಮಾತಿನಲ್ಲಿರುವ ತಥ್ಯವೇನೇ ಇರಲಿ, ಅದು ಹಿಂದುಸಮಾಜಕ್ಕೆ ಅಷ್ಟಾಗಿ ಒಳಿತನ್ನು ತರುವಂಥದ್ದಲ್ಲ.

ಕೃಷ್ಣದೇವರಾಯನು ಮಗನ ಸಾವಿನ ನೋವಿನಿಂದಲೇ ತನ್ನ ಐವತ್ತರ ಆಸುಪಾಸಿನ ಮಧ್ಯವಯಸ್ಸಿನಲ್ಲಿ ತೀರಿಕೊಂಡನು. ತನ್ನ ಆಡಳಿತದ ಅವಧಿಯಲ್ಲಿ ನೂರು ಬಗೆಯ ಒತ್ತಡಗಳ ನಡುವೆಯೂ ಉತ್ತಮವಾದ ರಾಜಕೀಯ ಮತ್ತು ಸಾಂಸ್ಕೃತಿಕ ಸಾಧನೆಗಳನ್ನು ಮಾಡಿದ. ಎರಡನ್ನೂ ಸರಿದೂಗಿಸಿದ. ಈತನೇ ಸ್ವತಃ ವಿದ್ವಾಂಸನಾಗಿದ್ದನು. 'ಆಮುಕ್ತಮಾಲ್ಯದ', 'ಸಕಲ ಕಥಾಸಾರಸಂಗ್ರಹ', 'ಮದಾಲಸ ಚರಿತ್ರ ಚಂಪೂ' ಇತ್ಯಾದಿಗಳು ಇವನ

ಪ್ರಸಿದ್ಧಕೃತಿಗಳು. ಸಂಸ್ಕೃತ ಮತ್ತು ತೆಲುಗಿನಲ್ಲಿ ಸ್ವತಃ ಉತ್ತಮ ಕವಿಯಾಗಿದ್ದನು. ಹಾಗೂ ಕವಿ–ಪಂಡಿತರಿಗೆ ಸತತವಾಗಿ ಪ್ರೋತ್ಸಾಹವನ್ನೂ ನೀಡುತ್ತಿದ್ದನು. ಕೃಷ್ಣದೇವರಾಯನು ಕನ್ನಡಕ್ಕೆ ಅನ್ಯಾಯ ಮಾಡಿದನೆಂದು ಇಂದು ಕೆಲವರು ಅಪಲಪಿಸುವುದುಂಟು, ಆದರೆ ಇದಕ್ಕೆ ಯಾವುದೇ ಐತಿಹಾಸಿಕವಾದ ಆಧಾರವಿಲ್ಲ. ಕನ್ನಡದಲ್ಲಿ ಹರಿದಾಸರ ಚಳವಳಿಗೆ ಕೇಂದ್ರವೆನಿಸಿದ ವ್ಯಾಸರಾಯರನ್ನು ತನ್ನ ಸಿಂಹಾಸನದಲ್ಲಿಯೇ ಕೂರಿಸಿದ ಕಥೆಯು 'ವ್ಯಾಸಯೋಗಿಚರಿತ'ದಲ್ಲಿ ಉಲ್ಲೇಖವಾಗಿದೆ. ದಾಸವರೇಣ್ಯರಾದ ಕನಕ–ಪುರಂದರರಿಗೂ ಇವನ ಮನ್ನಣೆಯಿದ್ದಿತು. ಇಂಥ ವಿರಕ್ತರಿಗೆ ದ್ರವಾತ್ಮಕವಾಗಿ ಯಾರು ತಾನೇ ಮತ್ತಾವ ಸಂಮಾನವನ್ನು ಸಲ್ಲಿಸಲು ಸಾಧ್ಯ? ತಿರುಪತಿಯ ಸ್ವಾಮಿಯ ಸನ್ನಿಧಿಯಲ್ಲಿ ತನ್ನ ವಿಗ್ರಹದ ಮೇಲೆ 'ಶ್ರೀಕೃಷ್ಣದೇವರಾಯರು' ಎಂದು ಕನ್ನಡಲಿಪಿಯಲ್ಲಿಯೇ ಬರೆಸಿದ್ದಾನೆ. ಅಂದಿನ ಹರಿದಾಸ ಚಳವಳಿಗೆ ಈತನ ಸಹಕಾರ ದೊಡ್ಡದು. ಶ್ರೀಕಾಕುಳದ ಮೇಲೆ ಯುದ್ಧಕ್ಕೆ ತೆರಳಿದಾಗ ಆಂಧ್ರ ಮಹಾವಿಷ್ಣುವು ಕನಸಿನಲ್ಲಿ ತೋರಿ ಇವನನ್ನು 'ಕನ್ನಡರಾಯ' ಎಂದು ಸಂಬೋಧಿಸಿದ್ದುದನ್ನು ಸ್ವತಃ ಕೃಷ್ಣದೇವರಾಯನೇ ಬರೆದುಕೊಂಡಿದ್ದಾನೆ (ಆಮುಕ್ತಮಾಲ್ಯದ 1–14). ಇವನಿಗೆ ಕನ್ನಡರಮಾರಮಣ'ನೆಂಬ ಬಿರುದೂ ಇದೆ. ಈತನ ಅಧಿಕಾಧಿಕ ಶಾಸನಗಳಿರುವುದೂ ಕನ್ನಡದಲ್ಲಿಯೇ. 'ಕೃಷ್ಣದೇವರಾಯ ಮಹಾಭಾರತ'ವನ್ನು ರಚಿಸಿದ ತೀರ ಸಾಧಾರಣದ ಕವಿ ತಿಮ್ಮಣ್ಣನಿಗೂ ದೊಡ್ಡ ಪದವಿಯನ್ನಿತ್ತು ಗೌರವಿಸಿದ್ದನು. ಎಲ್ಲ ಭಾಷೆಯ ಕವಿಗಳಿಗೂ ಸಮಾನಗೌರವವನ್ನು ನೀಡಿದ್ದನು. ವೈಯಕ್ತಿಕವಾಗಿ ತಾನು ವಿಷ್ಣುಭಕ್ತನಾದರೂ ವಿರೂಪಾಕ್ಷದೇವಸ್ಥಾನದ ರಾಜಗೋಪುರ ಮತ್ತು ಕಾಳಹಸ್ತಿಯ ರಾಜಗೋಪುರಗಳನ್ನು ನಿರ್ಮಿಸಿದನು.


ವಿಜಯನಗರದ ಅವಧಿಯಲ್ಲಿ ಯಾವುದೇ ರೀತಿಯ ಮತಾಂಧತೆಯಾಗಲಿ, ಭಾಷಾದ್ವೇಷಗಳಾಗಲಿ ಇರಲಿಲ್ಲ. ಭಾರತೀಯ ಕ್ಷಾತ್ರಪರಂಪರೆಯನ್ನು ಗಮನಿಸುವಾಗ ಮುಖ್ಯವಾಗಿ ಕಾಣುವ ಒಂದಂಶವೆಂದರೆ ಸಾಂಸ್ಕೃತಿಕ ಉಪಪ್ಲವಗಳ ವೈರಳ್ಯ. ಯಾವುದೇ ಕಾಲವಿರಲಿ, ಇಲ್ಲಿ ತಂತ್ರದ ಕೊರತೆಯಿದ್ದರೂ ಔದಾರ್ಯ, ನೀತಿ ಮತ್ತು ಪ್ರೀತಿಗಳ ಕೊರತೆಯಿರಲಿಲ್ಲ. ಆದರೆ ಇದನ್ನು ದಾಳಿಕೋರ ಮತಗಳಾದ ಪ್ರವಾದಿತಂತ್ರಗಳು ಅರಿಯಲಿಲ್ಲ, ಆದರಿಸಲೂ ಇಲ್ಲ.

– (ಭಾರತೀಯ ಕ್ಷಾತ್ರ ಪರಂಪರೆ ಕೃತಿಯಿಂದ)

## ಉಣ್ಣಲು ಅನ್ನವಿಲ್ಲ ಇನ್ನೂ ಬೇಕಂತೆ ಅಣುಬಾಂಬು

ಅಮೆರಿಕಾದ ಗುಪ್ತಚಾರ ಇಲಾಖೆಯು ಅಲ್ಲಿಯ ಸಂಸತ್ತಿಗೆ (ಕಾಂಗ್ರೆಸ್) ಪಾಕಿಸ್ತಾನದ ಕುರಿತು ತನ್ನ ಅಭಿಪ್ರಾಯದ ವರದಿಯನ್ನು ನೀಡಿತು. ಅದರ ಪ್ರಕಾರ ಪಾಕಿಸ್ತಾನದ ದುರ್ಬಲ ಆರ್ಥಿಕ ಪರಿಸ್ಥಿತಿಯ ನಡುವೆಯೂ ಅದು ತನ್ನ ರಕ್ಷಣಾ ವೆಚ್ಚವನ್ನು ಹಿಗ್ಗಿಸುತ್ತಿದೆ. ಭಾರತದ ಜೊತೆಗೆ ಇರುವ ಸಂಬಂಧಗಳು ಹಿತಕಾರಿಯಾಗಿಲ್ಲದಿರುವುದರಿಂದ ತನ್ನ ಅಣು ಶಸ್ತ್ರಾಸ್ತ್ರಗಳನ್ನು ಒಂದೇ ಸಮನೆ ಹೆಚ್ಚಿಸುವಲ್ಲಿ ಪಾಕಿಸ್ತಾನವು ನಿರತವಾಗಿದೆ ಎಂದು ಆ ವರದಿಯು ಹೇಳಿದೆ.

# ರಾಮೋತ್ಸವಗಳು


ಭದ್ರಾ ಪ್ರಖಂಡ


ನಾಗಮಂಗಲ



ಶಿವಮೊಗ್ಗ


ಮಾರತಹಳ್ಳಿ





ನಾಗಮಂಗಲ




ಮಲ್ಲತ್ತಹಳ್ಳಿ


ಬಸವೇಶ್ವರನಗರ




ಶೃಂಗೇರಿ


ಜ್ಞಾನಭಾರತಿ




ಸಾಗರ


ಬೈಲಹೊಂಗಲ


ನಾಗರಭಾವಿ


ಮಂಗಳೂರು


ಮಂಗಳೂರು


ಮಂಗಳೂರು


ಜ್ಞಾನಭಾರತಿ


ನಾಯಂಡಹಳ್ಳಿ


ಹಲಸೂರು


ಬನಶಂಕರಿ


ವಿಜಯನಗರ


ಹಕ್ಕಿಗಳಿಗೆ ಕಾಳು ನೀರು
ಅರಸಿಕೆರೆ ಸಿದ್ಧಪ್ಪ ಬೆಟ್ಟ

# ಅಮೆರಿಕದಲ್ಲಿ ಶ್ರೀರಾಮ ರಥಯಾತ್ರೆ

– ಸೀತಾಲಕ್ಷ್ಮೀ., ಯುಎಸ್‌ಎ



ಭಾರತದಲ್ಲಿ ವಿಶ್ವ ಹಿಂದು ಪರಿಷದ್ ಇರುವಂತೆಯೇ ಅಮೆರಿಕದಲ್ಲಿ ವಿಶ್ವ ಹಿಂದು ಪರಿಷದ್ ಅಮೆರಿಕ ಎಂದು ಇದೆ. ಇದು ಇಲ್ಲಿನ ಹಿಂದೂಗಳನ್ನು ಪ್ರತಿನಿಧಿಸುವ ಸಂಸ್ಥೆಯಾಗಿದ್ದು, ಪ್ರಚಾರದ ಮೂಲಕ ಹಿಂದೂಗಳಲ್ಲಿ ತಮ್ಮ ಧರ್ಮದ ಬಗ್ಗೆ ಅರಿವು ಮತ್ತು ಗೌರವ ಮೂಡಿಸುತ್ತಾ ಸೇವೆ, ಸಂಸ್ಕಾರ, ಸಂಪರ್ಕಗಳ ಧ್ಯೇಯಗಳನ್ನು ಒಳಗೊಂಡಿದೆ.

ಪರಿಷತ್ತು ಇತ್ತೀಚೆಗೆ ಶ್ರೀ ರಾಮ ರಥಯಾತ್ರೆ ಎಂಬ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಿತು. ಇದು 60 ದಿನಗಳ ಸಂಭ್ರಮ ಸಡಗರದ ಯತ್ರೆಯಾಗಿದ್ದು, ಮಾರ್ಚ್ 25ರ ಹೋಲಿ ಹಬ್ಬದ ದಿನದಂದು ಚಿಕಾಗೋ ನಗರದಿಂದ ಆರಂಭವಾಯಿತು. ಈ ಯಾತ್ರೆಯು 12,800 ಕಿ. ಮೀ. ದೂರವನ್ನು ಕ್ರಮಿಸಿ ಅಮೆರಿಕದಲ್ಲಿನ 851 ಮಂದಿರಗಳನ್ನು ತಲುಪಿ, ಎಲ್ಲ ಹಿಂದೂಗಳನ್ನು ಒಟ್ಟುಗೂಡಿಸುವ ಸಂಕಲ್ಪವನ್ನು ಹೊಂದಿದೆ.

ಯಾತ್ರೆಗಾಗಿ ಒಂದು ಟೊಯೊಟಾ ಕಾರನ್ನು ರಥದಂತೆ ಮಾರ್ಪಡಿಸಿ ರಾಮಾಯಣಕ್ಕೆ ಸಂಬಂಧಿಸಿದ ಚಿತ್ರಗಳಿಂದ ಅಲಂಕರಿಸಲಾಗಿದೆ. ಹಿಂಭಾಗದಲ್ಲಿ ರಾಮ, ಸೀತೆ, ಲಕ್ಷ್ಮಣ ಹನುಮಂತರ ಮೂರ್ತಿಗಳನ್ನು ಇರಿಸಲಾಗಿದೆ.

ಇತ್ತೀಚೆಗೆ ಅಯೋಧ್ಯೆಯ ರಾಮ ಮಂದಿರದಲ್ಲಿ ನಡೆದ ರಾಮನ ಪ್ರಾಣ ಪ್ರತಿಷ್ಠೆಯಲ್ಲಿ ಪೂಜಿತವಾದ ಅಕ್ಷತೆಯ ಕಲಶ ಹಾಗು ರಾಮ ಮಂದಿರದ ಮೊದಲ ದಿನದ ರಾಮನ ಅಲಂಕೃತ ಮೂರ್ತಿಯ ಸಣ್ಣ ಪ್ರತಿಕೃತಿಯನ್ನು ಸಹ ತರಲಾಗಿದೆ.ಈ ಮೂರ್ತಿ ಮತ್ತು ಕಲಶವನ್ನು ಎಲ್ಲ ಕಡೆ ಮಂದಿರದೊಳಗೆ ತೆಗೆದುಕೊಂಡು ಹೋಗಿ, ಪೂಜಿಸಲಾಗುತ್ತಿದೆ. ಸ್ಥಳೀಯ ಭಕ್ತರು ಈ ದಿವ್ಯ ಪುಟ್ಟ ಮೂರ್ತಿಯನ್ನು ದರ್ಶಿಸಿ, ಪೂಜಿಸಿ, ಭಕ್ತಿಯಿಂದ ನಮಿಸಿ, ಬೀಳ್ಕೊಂಡು ಸಂತುಷ್ಟರಾಗುತ್ತಿದ್ದಾರೆ.

ನಾನು ಪ್ರಸ್ತುತ ಇರುವ ಅರ್ಕಾನ್ಸಾಸ್ ರಾಜ್ಯದ ಬೆಂಟನ್ವಿಲ್ಲೇ ಎಂಬ ನಗರದಲ್ಲಿ ಶ್ರೀಮನ್ನಾರಾಯಣ ಮಂದಿರವಿದೆ. ಇಲ್ಲಿಗೆ ಏಪ್ರಿಲ್ 23 ರಂದು ಈ ರಥವು ಬಂದಿತ್ತು. ಅದು ಹನುಮ ಜಯಂತಿಯ ದಿನವಾಗಿದ್ದು ವಿಶೇಷವಾಗಿತ್ತು.ನಮಗೆ ರಥವು ಬರುವ ಸಮಯ ಬೆಳಿಗ್ಗೆ 10.00 ರಿಂದ 10.40 ಎಂದು ತಿಳಿಸಿದ್ದರು.ನಾವು ಮಂದಿರ



ತಲುಪುವಾಗ 10.15 ಆಗಿತ್ತು.ಅಷ್ಟರೊಳಗೆ ರಥವು ಆಗಮಿಸಿ ,ಕಲಶ ಮತ್ತು ರಾಮನ ಮೂರ್ತಿಯನ್ನು ಮಂದಿರದ ಒಳಗೆ ಇರಿಸಿದ್ದರು. ನಾವು ಭಕ್ತಾದಿಗಳು ದೇವರ ದರ್ಶನ ಪಡೆದು,ನಮಸ್ಕರಿಸಿ,ಅಕ್ಷತಾ ಪ್ರಸಾದ ಪಡೆದು ಧನ್ಯರಾದೆವು.ಮುಂದೆ ಭಾರತಕ್ಕೆ ಬಂದಾಗ ಅಯೋಧ್ಯೆಯಲ್ಲಿ ರಾಮ ಲಲ್ಲಾನ ದರ್ಶನ ಪಡೆಯುವೆವು ಎಂದು ನೆರೆದಿದ್ದವರೆಲ್ಲ ಸಂಕಲ್ಪ ತೊಟ್ಟೆವು. 11.00 ಗಂಟೆಗೆ ಇಲ್ಲಿನ ಭಕ್ತಾದಿಗಳಿಂದ ಬೀಳ್ಕೊಂಡ ರಾಮನು ಮುಂದೆ ಮತ್ತೊಂದು ದೇವಾಲಯಕ್ಕೆ ತನ್ನ ರಥದಲ್ಲಿ ಹೊರಟನು. ನಾವು ಧನ್ಯತಾ ಭಾವದಿಂದ ಮನೆಗೆ ಹಿಂದಿರುಗಿದೆವು.

## ಮನಸ್ಸು ತಿಳಿಯಾಗಲು ಮನಬಿಚ್ಚಿ ಮಾತನಾಡೋಣ

ಒಬ್ಬರಲ್ಲಿ ಮನಸ್ಸು ಬಿಚ್ಚಿ ಮಾತನಾಡುವುದು ಅಂತರಂಗವನ್ನು ಹಗುರಾಗಿಸುವುದಕ್ಕೆ ಮಾತ್ರ. ಸಮಸ್ಯೆಗಳಿಗೆ ಪರಿಹಾರ ದೊರೆಯದಿದ್ದರೂ ಕಿವಿಗೊಟ್ಟು ಕೇಳುವವರಲ್ಲಿ ಹೇಳಿಕೊಳ್ಳುವುದರಿಂದ ಮನಸ್ಸು ತಿಳಿಯಾಗಿ ಬಿಡುಗಡೆಯ ದಾರಿ ನಮಗೆ ಗೋಚರಿಸುತ್ತದೆ. ಕೇಳಿಸಿಕೊಳ್ಳುವವರು ನಮಗೆ ಯಾವುದೇ ಸಲಹೆಯನ್ನು ಕೊಡದೇ ಹೋದರೂ ಅವರು ಕೇಳಿಸಿಕೊಳ್ಳುತ್ತಿದ್ದಾರೆ ಎಂಬುದೇ ಮುಖ್ಯವಾಗುತ್ತದೆ. ನಮ್ಮೊಳಗಿನ ಬೆಳಕು ನಮಗೆ ಕಾಣಿಸಬೇಕಾದರೂ ನಮ್ಮ ಕಣ್ಣಿಗೆ ಕವಿದ ಕತ್ತಲ ಜವನಿಕೆ ತೆರೆಯಬೇಕು. ಅಷ್ಟಕ್ಕಾದರೂ ಬೇಕಿರುವುದು ಮನಸ್ಸಿಟ್ಟು ಕೇಳಿಸಿಕೊಳ್ಳುವ ಮನಸ್ಸುಗಳು ಮಾತ್ರ.




ಸಂವಹನದ ಅತಿದೊಡ್ಡ ಸಮಸ್ಯೆಯೆಂದರೆ ನಾವು ಅರ್ಥಮಾಡಿಕೊಳ್ಳುವುದಕ್ಕಾಗಿ ಕೇಳುವುದಿಲ್ಲ, ಉತ್ತರಿಸುವುದಕ್ಕಾಗಿ ಕೇಳುತ್ತೇವೆ, ಅಂದನೊಬ್ಬ ಚಿಂತಕ. ಪರಸ್ಪರರ ಮಾತುಗಳನ್ನು ಒಬ್ಬರ ಮೇಲೊಬ್ಬರು ಸಿಟ್ಟಾಗದೇ, ಹತಾಶೆ ವ್ಯಕ್ತಪಡಿಸದೇ ಕೇಳಿಸಿಕೊಳ್ಳುವ ಮೂಲಕ ಅವರು ಒಬ್ಬರಿಗೊಬ್ಬರು ಅತ್ಯುತ್ತಮ ಉಡುಗೊರೆ ಕೊಟ್ಟುಕೊಳ್ಳುತ್ತಾರಂತೆ. ಅದೆಂದರೆ ಯಾವುದೇ ವಸ್ತು ರೂಪದಲ್ಲಲ್ಲ. ತಮ್ಮೊಳಗಿನ ತುಮುಲಗಳನ್ನೆಲ್ಲ ತೆರೆದಿಡುವ ಮುಕ್ತ ಅವಕಾಶದ ಮೂಲಕ. ಅಷ್ಟು ದೊರೆಯುತ್ತಿದ್ದರೆ ಸಾಕು, ಅವರಿಗೆ ತಮ್ಮೊಳಗನ್ನು ಕೇಳುವವರಿದ್ದಾರೆ, ಅರ್ಥಮಾಡಿಕೊಳ್ಳುವವರಿದ್ದಾರೆ ಎಂಬ ನಂಬಿಕೆ ಭದ್ರವಾಗುತ್ತದೆ. ಪರಿಣಾಮವಾಗಿ ಒಬ್ಬರಿನ್ನೊಬ್ಬರ ಪ್ರೀತಿ, ನಂಬಿಕೆ, ಸ್ವೀಕೃತಿ, ಮೆಚ್ಚುಗೆ, ಪ್ರೋತ್ಸಾಹ ಎಲ್ಲವನ್ನೂ ಪಡೆಯುತ್ತಾರೆ, ಅದರಿಂದ ಮನೆ ಮನಗಳು ಬೆಳಗುತ್ತವೆ. ಬದುಕಿನ ಬೆಸುಗೆ ಭದ್ರವಾಗುತ್ತದೆ.

ನೆಮ್ಮದಿಯ ಮನೆ ನಮ್ಮದಾಗಬೇಕಾದರೆ ಅಗತ್ಯವಿರುವುದು ದುಬಾರಿ ಉಡುಗೊರೆಗಳಲ್ಲ, ದುಡ್ಡಿನಿಂದ ಖರೀದಿಸಲಾಗದ ಒಂದು ಹಿಡಿ ಪ್ರೀತಿ ಮತ್ತು ಕೊಂಚ ಸಮಯವನ್ನು ಬಯಸುವ, ಪರಸ್ಪರರ ಮಾತುಗಳನ್ನು ಕೇಳುವ ತಾಳ್ಮೆ! ಆ ಸಮಯ, ಆ ತಾಳ್ಮೆ ನಮಗೆ ಒದಗಲಿ.

*(ಕಳೆದ ಸಂಚಿಕೆಯಿಂದ)*

# ಆಚಾರ್ಯ ಚಾಣಕ್ಯ

– ವಿ.ಸಿ. ಶೇಖರ್, **ಬೆಂಗಳೂರು**



ಅಮಾತ್ಯ ರಾಕ್ಷಸನ ಚಲನವಲನಗಳನ್ನು ಗುಪ್ತಚಾರರಿಂದ ತಿಳಿದ ಚಾಣಕ್ಯನು ಅವನು ಯಾವ ಯಾವ ರಾಜರ ಸ್ನೇಹ ಬಯಸಿದ್ದನೋ ಅವರೆಲ್ಲರನ್ನು ಚಂದ್ರಗುಪ್ತನ ಆಧೀನರನ್ನಾಗಿ ಮಾಡುವುದರಲ್ಲಿ ಯಶಸ್ವಿಯಾದನು. ರಾಜರಾಜರುಗಳಲ್ಲಿ ಪರಸ್ಪರ ಅಪನಂಬಿಕೆ ಹುಟ್ಟಿಸಿ ಅವರನ್ನು ನಿರ್ಬಲರನ್ನಾಗಿ ಮಾಡಿ ಅವರು ರಾಕ್ಷಸನಿಗೆ ಸಹಾಯಕರಾಗದಂತೆ ನೋಡಿಕೊಂಡನು. ರಾಕ್ಷಸನ ಪರಿವಾರವನ್ನು ಹಿಡಿದು ಅವನ ಆಪ್ತಮಿತ್ರರನ್ನು ಬಂಧಿಸಿ ರಾಕ್ಷಸನು ಅವರ ರಕ್ಷಣೆಗೆ ಬರುವುದು ಅನಿವಾರ್ಯವಾಗುವ ಸ್ಥಿತಿಯನ್ನು ಸೃಷ್ಟಿಸಿದನು. ಬೇರೆ ಉಪಾಯ ಕಾಣದೆ ರಾಕ್ಷಸನು ಪ್ರತ್ಯಕ್ಷವಾಗಿ ಬರಲೇಬೇಕಾಯಿತು. ಆಗ ಸ್ವತಃ ಚಾಣಕ್ಯನೇ ಅಮಾತ್ಯ ರಾಕ್ಷಸನನ್ನು ಚಂದ್ರಗುಪ್ತನ ಮಂತ್ರಿಯಾಗಿ ಮಗಧ ರಾಜ್ಯವನ್ನು ಕಾಪಾಡುವಂತೆ ಕೇಳಿಕೊಂಡನು.

ಚಾಣಕ್ಯನ ಬುದ್ಧಿ ಕುಶಲತೆಗೆ ಮಾರು ಹೋಗಿದ್ದ ಅಮಾತ್ಯ ರಾಕ್ಷಸನು ಅವನ ನಿಸ್ವಾರ್ಥ ಹಾಗೂ ತ್ಯಾಗ ಬುದ್ಧಿಗೆ ಸೋತು ಹೋದನು. ನಂತರ ಚಂದ್ರಗುಪ್ತನ ಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದನು. ಇದರಿಂದ ಚಾಣಕ್ಯನಿಗೆ ರಾಜಕಾರ್ಯಗಳಿಂದ ಬಿಡುವು ದೊರೆಯಿತು ಅಮಾತ್ಯ ರಾಕ್ಷಸನ ದಕ್ಷ ನೇತೃತ್ವದಲ್ಲಿ ರಾಜ್ಯವು ಅಭಿವೃದ್ಧಿ ಮುಖವಾಯಿತು.

ರಾಜ್ಯದ ಸುಭದ್ರತೆಗೆ ದಕ್ಷ ಆಳ್ವಿಕೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದುದು. ಆರ್ಥಿಕ ನೀತಿ. ಇದು ಅವನ ಎರಡನೇ ಧ್ಯೇಯವಾಗಿತ್ತು. ಅದಕ್ಕಾಗಿ ಚಿಂತಿಸಲು ಅವನಿಗೀಗ ಸಮಯ ಸಿಕ್ಕಿತು. ತನ್ನ ಚಿಂತನೆಯನ್ನು ಪುಸ್ತಕ ರೂಪದಲ್ಲಿ ಪ್ರಕಟಗೊಳಿಸಿದನು. ಅದೇ ಕೌಟಿಲ್ಯನ ಅರ್ಥಶಾಸ್ತ್ರ.

ಅರ್ಥಶಾಸ್ತ್ರದಲ್ಲಿ ರಾಜ್ಯದ ಆಡಳಿತ, ಧನ ಸಂಗ್ರಹ, ಧನವ್ಯಯ, ತೆರಿಗೆ ವಿಧಿಸುವ ನಿಯಮ, ಸೈನ್ಯ ಸಂಚಾಲನೆ ಮುಂತಾದ ರಾಜಧರ್ಮವನ್ನು ವಿವೇಚಿಸಲಾಗಿದೆ. ಈ ಅರ್ಥಶಾಸ್ತ್ರ ದೇಶದ ಆರ್ಥಿಕ ನೀತಿಯನ್ನು ಪ್ರತಿಪಾದಿಸುತ್ತದೆ ಇದರೊಂದಿಗೆ ಚಾಣಕ್ಯನು ಮತ್ತೊಂದು ಗ್ರಂಥವನ್ನು ಬರೆದನು. ಅದು 'ಚಾಣಕ್ಯ ನೀತಿ' ಎಂದು ಪರಿಚಿತವಾಗಿದೆ. ರಾಜನು, ಅವನ ಕರ್ಮಚಾರಿಗಳು ಇತ್ಯಾದಿ ಅಧಿಕಾರಿ ವರ್ಗದವರು ಹೇಗೆ ಕೆಲಸ ಮಾಡಬೇಕೆಂಬುದು ಇದರಲ್ಲಿ ವಿವರಿಸಲಾಗಿದೆ.

ಕ್ರಿ. ಪೂ ಮೂರನೇ ಶತಮಾನದಲ್ಲಿ ಅವನು ಪ್ರತಿಪಾದಿಸಿದ್ದ ರಾಜನೀತಿ, ಆರ್ಥಿಕನೀತಿ, ಇಂದಿಗೂ ಹೊಂದುವಂತಿದ್ದು ಅವು ಬೇರೆ ಬೇರೆ ರೀತಿಗಳಲ್ಲಿ ಇಂದು ಪ್ರಚಲಿತವಾಗಿದೆ.

ಅವನು ಗೊತ್ತು ಪಡಿಸಿದ ತೆರಿಗೆ ಸಿದ್ಧಾಂತಗಳು ಪ್ರಪಂಚದಲ್ಲಿ ಆಚರಣೆಯಲ್ಲಿವೆ. ತೆರಿಗೆಯು ಜನರಿಗೆ ಹಿಂಸಾತ್ಮಕವಾಗಿರಬಾರದು, ತೆರಿಗೆ ನೀತಿಗಳನ್ನು ನಿರ್ಣಯಿಸುವಾಗ ಸಡಿಲತೆ, ಸರಳತೆ, ಮತ್ತು ಎಚ್ಚರಿಕೆ ಇರಬೇಕು. ತೆರಿಗೆಯ ವಸೂಲಿ ಜೇನು ಹುಳಗಳು ಜೇನನ್ನು ಸಂಗ್ರಹಿಸುವ ಮಾದರಿಯಲ್ಲಿರಬೇಕು. ಹೇಗೆ ಜೇನು ಹುಳು ಹೂವಿಗೆ ನೋವಾಗದಂತೆ ಮಧುವನ್ನು ಸಂಗ್ರಹಿಸುವುದೋ ಹಾಗೂ ಹೂವಿಗೆ ಯಾವುದೇ ಹಾನಿಯಾಗದಂತೆ ಇರುವುದೋ ಹಾಗೆ ತೆರಿಗೆಯನ್ನೂ ಸ್ವಲ್ಪ ಸ್ವಲ್ಪವೇ ವಸೂಲಿ ಮಾಡಬೇಕೆಂದು ಹೇಳಿದ್ದಾನೆ.

ಚಾಣಕ್ಯನ ಗ್ರಂಥಗಳಾದ ಅರ್ಥಶಾಸ್ತ್ರ, ನೀತಿಶಾಸ್ತ್ರ, ಮತ್ತು ಚಾಣಕ್ಯ ನೀತಿ ಕೃತಿಗಳು ಅದ್ವಿತೀಯವಾದವು. ಅವು ನಿಜವಾದ ರಾಜನೀತಿ ಹಾಗೂ ಸಾರ್ವಕಾಲಿಕ ಸತ್ಯವನ್ನು ಪ್ರತಿಪಾದಿಸುತ್ತವೆ. ಅವನ ಅಭಿಪ್ರಾಯಗಳು ವಿಶಾಲವಾದ ವ್ಯಾಪ್ತಿಯನ್ನು ಹೊಂದಿವೆ. ಎಲ್ಲಾ ಕಾಲಕ್ಕೂ ನವೀನವಾಗಿಯೇ ಉಳಿದುಕೊಂಡಿವೆ. ಅವನು ಕಾರ್ಯಸಾಧನೆಗೆ ಗೂಢಚಾರರನ್ನು ಪ್ರಚೋದನೆ ಮಾಡುವ ಮಧ್ಯವರ್ತಿಗಳನ್ನು ನೇಮಿಸಿಕೊಳ್ಳುವ ಸಲಹೆ ನೀಡಿದ್ದಾನೆ.

**ನಮ್ಮ ದೇಶದ ಪಕ್ಕದಲ್ಲಿರುವ ದೇಶವು ಸದಾ ಶತ್ರು ದೇಶವಾಗಿರುತ್ತದೆ. ಆದರೆ ಶತ್ರು ದೇಶಕ್ಕೆ ಶತ್ರುವಾಗಿರುವ ದೇಶವು ನಮಗೆ ಮಿತ್ರನಾಗಿರುತ್ತದೆ. – ಚಾಣಕ್ಯ ನೀತಿ**

ಭಾರತವು ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕವಾಗಿ ಮುಂಚೂಣಿಯಲ್ಲಿ ನಿಲ್ಲಬಲ್ಲ ರಾಷ್ಟ್ರವಾಗುವುದೆಂದು ಚಾಣಕ್ಯನು ಪರಿಗಣಿಸಿದ್ದನು. ಭಾರತ ಇಂದು ಅನುಸರಿಸುತ್ತಿರುವ ಅನೇಕ ಮಾರ್ಗಗಳು ಚಾಣಕ್ಯನ ಉದಾತ್ತ ಭಾವನೆಯ ಗ್ರಂಥವಾದ 'ಅರ್ಥಶಾಸ್ತ್ರ'ದ ಕನಸುಗಳೇ ಆಗಿವೆ. ಆ ಕಾಲದಲ್ಲಿ ವಿವಿಧ ಬಗೆಯ ಉತ್ಪಾದನೆ ಹಾಗೂ ರಾಜಕೀಯವು ಸಂದಿಗ್ಧ ಸಮಯದಲ್ಲಿ ಸಿಲುಕಿತ್ತು. ಕೃಷಿ, ಹೈನುಗಾರಿಕೆ ಮತ್ತು ವ್ಯಾಪಾರ ಪ್ರಮುಖ ಉದ್ಯೋಗಗಳಾಗಿದ್ದವು. ಈ ಮೂರರಲ್ಲಿ ಕೃಷಿಯೇ ಆರ್ಥಿಕ ಸ್ಥಿತಿಗೆ ಮೂಲವೆಂದು ಚಾಣಕ್ಯನು ಭಾವಿಸಿದ್ದನು. ಈಗಲೂ ಭಾರತ ಕೃಷಿಯಾಧಾರಿತ ಆರ್ಥಿಕ ನೀತಿಯನ್ನು ಅನುಸರಿಸುತ್ತಿರುವುದು. ನಿಜ, ಇಂದಿಗೂ ಚಾಣಕ್ಯರ ಅರ್ಥಶಾಸ್ತ್ರ ಪ್ರಸ್ತುತವಾಗಿದೆ. ಇದರಲ್ಲಿ 6000 ಪದ್ಯಗಳಿವೆ 15 ವಿಭಾಗಗಳು 180 ಅಧ್ಯಾಯಗಳಿವೆ. ಮುಖ್ಯವಾಗಿ ರಾಜ, ಮಂತ್ರಿ, ಆಡಳಿತಗಾರರ ಮುಖ್ಯ ಕರ್ತವ್ಯಗಳು, ನ್ಯಾಯಾಂಗ, ವಿದೇಶನೀತಿ, ಆರ್ಥಿಕ ಸುಧಾರಣೆಗಳು ಮೊದಲಾದ ವಿವರಗಳಿವೆ.

ಇನ್ನು ಚಾಣಕ್ಯ ನೀತಿ ಅತ್ಯಂತ ಸರಳವಾಗಿ ನೇರವಾಗಿ ಮನಮುಟ್ಟುವಂತಿದೆ. ಅವನ ನೀತಿ ವಾಕ್ಯಗಳು ಮನುಷ್ಯನ ಜೀವನವನ್ನು ಪರಿಪೂರ್ಣಗೊಳಿಸಲು ಅರ್ಹವಾಗಿವೆ. ಅವನೊಬ್ಬ ಪರಿಪೂರ್ಣ ಬುದ್ಧಿವಂತ. ಅವನ ಬುದ್ಧಿ, ಸೃಷ್ಟಿ ಸಾಮರ್ಥ್ಯ, ಅವನಲಿದ್ದ ಮೂಲ ಭಾವನೆಗಳು, ಆಲೋಚನಾ ಶಕ್ತಿ, ವಿದ್ವತ್ತು, ನಾಯಕತ್ವ ಗುಣ, ಅಲ್ಲದೆ ರಾಜಕೀಯವಾಗಿ ಅವನು ಚಿಂತಿಸುತ್ತಿದ್ದ ಮಾರ್ಗಗಳು ಇವೆಲ್ಲ ಒಬ್ಬ ಮನುಷ್ಯನಲ್ಲಿ ಇದ್ದುದನ್ನು ಎಲ್ಲೂ ಕಂಡಿಲ್ಲ ಕೇಳಿರಲಿಲ್ಲ. ಇದೇ ಕಾರಣಕ್ಕಾಗಿ ಚಾಣಕ್ಯನು ಐತಿಹಾಸಿಕ ಪುರುಷನಾಗಿ ಆದರ್ಶ ಪ್ರಾಯನಾಗಿರುವನು.



# ಹಕ್ಕಿಗಳೊಂದಿಗೆ ಹಾರಾಟ

ಹಕ್ಕಿಗಳೇ.. ಮುದ್ದು ಹಕ್ಕಿಗಳೇ...
ಬಾನಿನವರೆಗೂ ಏರುತ ಸಾಗುವ
ಚುಕ್ಕಿಗಳೇ... ಬಣ್ಣದ ಹಕ್ಕಿಗಳೇ...

ರೆಕ್ಕೆಯ ಬಿಡಿಸಿ, ಗಕ್ಕನೆ ಚಲಿಸಿ
ಮೇಲು ಮೇಲಕೆ ಹಾರುವಿರಾ?
ಮಕ್ಕಳು ಕರೆದರೆ.. ಪುಕ್ಕಲರಂತೆ
ಸಿಕ್ಕದೆ ದೂರಕೆ ಏರುವಿರಾ?
ನಾನು ಬರಲೇ ನಿಮ್ಮಯ ಜೊತೆಗೆ
ನೀಲಾಕಾಶಕೆ ನಡೆಸುವಿರಾ.. ॥ ಹಕ್ಕಿಗಳೇ ॥

ರಜೆಯಲಿ ನಾನು, ಹಳ್ಳಿಯಲಿದ್ದು
ನಿಮ್ಮನ್ನೆಲ್ಲಾ ನೋಡಿರುವೆ...
ಕಪ್ಪಿನ ಕಾಗೆ, ಕೆಂಪಿನ ಕೋಳಿ
ಪುಟಾಣಿ ಗುಬ್ಬಿಯ ಕರೆದಿರುವೆ...
ದೂರದ ಮರದಲಿ ಗಾಯನ ಮಾಡಿದ
ಕೋಗಿಲೆ ಜೊತೆಯಲಿ ಹಾಡಿದ್ದೆ... ॥ ಹಕ್ಕಿಗಳೇ ॥



ಪಚ್ಚೆಯ ಬಣ್ಣದ ಮೆಚ್ಚಿನ ಗಿಳಿಯ
ಎಷ್ಟೋ ಸಲ ಮಾತಾಡಿಸಿದೆ
ಬೆಳ್ಳನೆ ಕೊಕ್ಕರೆ... ಧ್ಯಾನಕೆ ನಿಂತಿರೆ
ಹತ್ತಿರ ಧಾವಿಸಿ ಕರೆದಿದ್ದೆ..
ಬೆಟ್ಟವನಿಳಿದು ಬಯಲಲಿ ಕುಣಿದಾ
ನವಿಲುಗಳ ಒಡನಾಡಿದ್ದೆ... ॥ ಹಕ್ಕಿಗಳೇ ॥





ಮಿಂಚುಳ್ಳಿಯು, ಮರಕುಟಿಗವು ಸೇರಿ
ಹಾರಾಡಿದ್ದುದ ತಿಳಿದಿದ್ದೆ...
ಸಂಜು ಹೂಡಿದ ಟಿಟ್ಟಿಭ ಪಕ್ಷಿಯ
ಕತೆಯನು ಪೂರಾ ಕೇಳಿದ್ದೆ...
ತರ ತರ ಬಣ್ಣದ ಚಿಲಿಪಿಲಿ ಗಾನದ ॥
ಹಾರಾಟದ ಪರಿ ಕಾಣಿಸಿದೇ ॥ ಹಕ್ಕಿಗಳೇ ॥



ನೆಲ, ಜಲ, ಪರಿಸರ ಮಲಿನವಾಗಿದೆ
ಅದಕ್ಕೇ ದೂರಕೆ ಹಾರಿದಿರಾ?
ನನ್ನನು ಕೂಡ ನಿಮ್ಮಯ ಜೊತೆಗೆ
ನೀಲಾಕಾಶಕೆ ಕರೆಸುವಿರಾ....
ಒಮ್ಮೆಯಾದರೂ ರೆಕ್ಕೆಯ ಹಚ್ಚುತ
ಹಾರಲೆನಗೆ ಜೊತೆಯಾಗುವಿರಾ ॥ ಹಕ್ಕಿಗಳೇ ॥

**ಇಂದಿರಾ ಹಾಲಂಬಿ**

ಕನ್ನಡ ಮಕ್ಕಳ ಕಂಠಾಭರಣ ಸಂಕಲನದಿಂದ
ಸಂದೀಪ ಸಾಹಿತ್ಯ, ಅತ್ರಾಡಿ (ಉಡುಪಿ ಜಿಲ್ಲೆ)

# ನಿಮಗೆಷ್ಟು ಗೊತ್ತು




– ಬಿ.ಈ. ಸೀತಾಲಕ್ಷ್ಮೀ, ಯು.ಎಸ್.ಎ.

1) ದೇಶದ ಮೊದಲ ಅಶೋಕ ಚಕ್ರ ಪ್ರಶಸ್ತಿಗಳಿಸಿದ ಮಹಿಳೆ ಯಾರು?
2) ಸಸ್ಯಗಳಿಗೂ ಜೀವವಿರುತ್ತದೆ ಎಂದು ನಿರೂಪಿಸಿದ ಭಾರತೀಯ ವಿಜ್ಞಾನಿ ಯಾರು?
3) 'ಮಹಾ ಬ್ರಾಹ್ಮಣ' ಗ್ರಂಥದ ಕರ್ತೃ ಯಾರು?
4) ಮಂತ್ರಗಳನ್ನೊಳಗೊಂಡ ವೇದದ ಮೊದಲನೇ ಸಂಗ್ರಹ ಯಾವುದು?
5) ದ್ವಾರಕಾದಲ್ಲಿ ಇತ್ತೀಚೆಗೆ ಉದ್ಘಾಟನೆಗೊಂಡ ದೇಶದ ಅತಿ ಉದ್ದದ ಕೇಬಲ್ ಸೇತುವೆ ಯಾವುದು?
6) ಕನ್ನಡ ಭಾಷೆಯ ಕಾದಂಬರಿ ಪಿತಾಮಹ ಯಾರು?
7) ಸಂಸ್ಕೃತ ವ್ಯಾಕರಣ ಪಂಡಿತ ಪಾಣಿನಿಯ ಗುರು ಯಾರು?
8) ಯಾವ ರಾಜ್ಯ ಸರಕಾರ 'ವಿದ್ಯಾರಥ, ಸ್ಕೂಲ್ ಆನ್ ವೀಲ್ಸ್' ಯೋಜನೆಯನ್ನು ಪ್ರಾರಂಭಿಸಿದೆ?
9) ರಾಷ್ಟ್ರೀಯ ತಂತ್ರಜ್ಞಾನ ದಿನವನ್ನು ಎಂದು ಆಚರಿಸಲಾಗುತ್ತದೆ?
10) ಯಾವ ಕ್ರೀಡೆಯನ್ನು 'ಕ್ರೀಡೆಯ ರಾಜ' ಎಂದು ಪರಿಗಣಿಸಲಾಗುತ್ತದೆ?






**ಉತ್ತರಗಳು**

1) ನೀರಜಾ ಭಾನೋಟ್
2) ಜಗದೀಶ ಚಂದ್ರ ಬೋಸ್
3) ದೇವುಡು ನರಸಿಂಹ ಶಾಸ್ತ್ರಿ
4) ಸಂಹಿತೆ.
5) ಸುದರ್ಶನ ಸೇತು
6) ಗಳಗನಾಥ
7) ಉಪಪರ್ವ
8) ಅಸ್ಸಾಂ
9) ಮೇ 11 ರಂದು
10) ಸಾಕರ್


(9–10 ಉತ್ತರಗಳು ಸರಿಯಾದರೆ ಅತ್ಯುತ್ತಮ, 7–8 ಉತ್ತಮ)

**ಕಳೆದ ತಿಂಗಳ ಈ ಅಂಕಣದ ಹತ್ತನೆಯ ಪ್ರಶ್ನೆಯ ತಿದ್ದುಪಡಿ:**
ಒಲಿಂಪಿಕ್ ಸ್ಪರ್ಧೆಯಲ್ಲಿ ಪದಕ ಗೆದ್ದ ಮೊದಲ ಮಹಿಳೆ ಯಾರು? ಎಂದಾಗಬೇಕು.

**ಉತ್ತರ: ಕರ್ಣಂ ಮಲ್ಲೇಶ್ವರಿ** (ಆಕೆ ಕಂಚಿನ ಪದಕ ಗೆದ್ದಿದ್ದರು.) ಪ್ರಶ್ನೆಯಲ್ಲಿ ಮೊದಲ ಚಿನ್ನದ ಪದಕ ಗೆದ್ದವರು ಯಾರು? ಎಂದು ತಪ್ಪಾಗಿ ಕೇಳಲಾಗಿದ್ದಿತು.

# ಶಬ್ದಶೋಧ–197

**ರಚನೆ:** ಉಮಾ.ಎಂ.ಎಸ್., ಬನಶಂಕರಿ, ಬೆಂಗಳೂರು



## ಎಡದಿಂದ ಬಲಕ್ಕೆ

1. ಒಂದು ರಬ್ಬರ್‌ಚೆಂಡು ಎಂಟು ಹತ್ತು ಚಪ್ಪಟೆಕಲ್ಲುಗಳಿಂದ ಆಡುವ ಆಟ (3)
3. ಕರ್ನಾಟಕದ ಶ್ರೇಷ್ಠ ಬ್ಯಾಡ್ಮಿಂಟನ್ ಆಟಗಾರನ ಹೆಸರಿನ ಪೂರ್ವಾರ್ಧ ಹಿಂದು ಮುಂದಾಗಿದೆ (3)
5. ಕುದುರೆ ಸವಾರ (3)
7. ಧ್ಯಾನ್‌ಚಂದ್ ಅವರಿಗೆ ಹೀಗೊಂದು 'ಯಕ್ಷಿಣಿಗಾರ' ಅರ್ಥದ ಬಿರುದು (5)
8. ರಾಣಿಯ ಮಾತು ಹೀಗೆ ಯಾವಾಗಲೂ ಸ್ಪಷ್ಟವಾಗಿರುವುದು (3)
9. ಮೊದಲಿಗೆ ರಾಜ, ಮಹಾರಾಜ, ಶ್ರೀಮಂತರ ಆಟವಾಗಿದ್ದ ಕ್ರೀಡೆ (3)
10. ಲೆತ್ತದ ಆಟ (3)
12. ನರಿಯ ಜಾತಿಗೆ ಸೇರಿದ ಒಂದು ಕಾಡುಪ್ರಾಣಿ (3)
15. ಈಗಿನ ಯುವಕರಲ್ಲಿ ಕ್ರಿಕೆಟ್‌ನಂತೆ ಆಟವೂ ಜನಪ್ರಿಯ (3)
17. ನಮ್ಮ ಹಕ್ಕಿಗಳೆಲ್ಲಾ ಬಚ್ಚಿಟ್ಟುಕೊಳ್ಳಿ ಎನ್ನುವ ಹಿಂದಿನ ಕಾಲದ ಮಕ್ಕಳಾಟ (5)
18. ಕನ್ನಡದ ಶ್ರೇಷ್ಠ ವಿಮರ್ಶಕ ಗೋವಿಂದರಾಜು ಅವರ ಹೆಸರಿನ ಪೂರ್ವಾರ್ಧ (3)
19. ಮುಸುಕು ಹಾಕಿಕೊಂಡ ಹಿಂದು ಮುಂದಾದ ಸುಮಾ (3)

## ಮೇಲಿನಿಂದ ಕೆಳಗೆ

1. ಬಿಲ್ಲುಗಾರಿಕೆಯಲ್ಲಿ ಈ ಗುರಿ ನಿಖರವಾಗಿರಬೇಕು (2)
2. ದೂರ, ದೂರ ನಿಂತ ಆಟಗಾರರು ಕೋಲನ್ನು ಕೈ ಬದಲಾಯಿಸಿ ಓಡುವ ಆಟ (2)
3. ಪಗಡೆಯಾಟದಲ್ಲಿ ಮೋಸದಿಂದ ಪಾಂಡವರನ್ನು ಸೋಲಿಸಿದವನು (3)
4. ಕುಸ್ತಿಯಲ್ಲಿ ಹಾರ ಹಾಕಿಕೊಳ್ಳಬೇಕಾದರೆ ಈ ಹೊಡೆತ ನಿಕರವಾಗಿರಬೇಕು (3)
5. ಹೆಣ್ಣು ಮಕ್ಕಳೂ ಕಲಿಯುವ ಆತ್ಮ ರಕ್ಷಣೆಯ ಆಟವನ್ನು ಹುಡುಕಿ (3)
6. ಕತ್ತಲು/ಅಜ್ಞಾನ ಕೊನೆಯಲ್ಲಿ ಅರ್ಧ ಅಕ್ಷರವಾಗಿದೆ (3)
10. ಸೈನ್ಯ, ಸಮೂಹ ಅಥವಾ ಹೊಂದು, ಗಳಿಸು ಅರ್ಥದ ಪದ (2)
11. ಆಟದಲ್ಲಿ ಕಾಯಿಗಳನ್ನು ಚಲಿಸುವ ಕ್ರಿಯೆ, ತಲೆಕೆಳಗಾಗಿದೆ (2)
12. ಲಾಗ, ಚಕ್ರಕಾರವಾಗಿ ಸುತ್ತುವುದು, ಇಲ್ಲಿ ಹಿಂದು ಮುಂದಾಗಿದೆ (3)
13. ಭಾರತದಲ್ಲೇ ಹುಟ್ಟಿ, ಬೆಳೆದ ಜನಪ್ರಿಯ ಆಟವನ್ನು ಹುಡುಕಿ (3)
14. ನಮಸ್ಕರಿಸು (3)
15. ಕನ್ನಡದ ಜಾಂಡೀಸ್ ಅನ್ನು ಹುಡುಕಿ (3)
16. ಎತ್ತು, ಪ್ರಾಣಿಗಳ ಗುಟುರು (3)

# ಶಬ್ದಶೋಧ–196 ಉತ್ತರ

***ರಚನೆ:*** *ಉಮಾ.ಎಂ.ಎಸ್., ಬನಶಂಕರಿ, ಬೆಂಗಳೂರು*

| | | | | | | | | | |
|---|---|---|---|---|---|---|---|---|---|
| | | | [1] ಸ | ನಾ | ತ | [2] ನ | | | |
| | [3] ತ | ಳ | ಜಾ | | | [4] ಕ್ಷ | ಮ | [5] ತೆ | |
| | ರಂ | | ತೀ | | | ತ್ರಿ | | ನ್ಯ | |
| [6] ಬೋ | ಗ | ಧ | ಯ | | | [7] ಕ | ರಿ | ಮಾ | [8] ಯಿ |
| ಧಿ | | | | | | | | | ವಾ |
| ತ್ವ | | | | | | | | | ರು |
| [9] ಸ | [10] ಭಾ | ಸ | [11] ದ | | | [12] ಲಂ | ದ | [13] ಣಿ | ಗ |
| | ನ್ಸ | | ರ | | | ಬೋ | | ವ | |
| | [14] ರಿ | ಧಿ | ವಾ | | | [15] ದ | ಲಾ | ಲಾ | |
| | | | [16] ಜ | ನಿ | ವಾ | ರ | | | |

# ಮೈವೆತ್ತ ಕ್ಷಾತ್ರತೇಜಸ್ಸು
# ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ

– **ಚಿ.ನಾ. ಸೋಮೇಶ,** ಮಾದಾಪುರ ಕೊಡಗು



ಕೊಡಗಿನ ಕ್ಷಾತ್ರತೇಜಸ್ವೀ ಶಿಸ್ತು ಮೈವೆತ್ತ ಮಹಾನ್ ಭಾರತದ ವೀರ, ಸೇನಾನಿ, ಫೀಲ್ಡ್ ಮಾರ್ಷಲ್ ಕೊಡಂದೇರ ಮಾದಪ್ಪ ಕಾರ್ಯಪ್ಪ, ಅದ್ಭುತ ಸಮರ ಕಲಿ. ಸ್ವತಂತ್ರ ಭಾರತದ ಹೆಮ್ಮೆಯ ಈ ಸಮರವೀರ ಭೂಸೇನೆ, ನೌಕಾಪಡೆ, ವಾಯು ಸೇನೆಯ ಮುಖ್ಯಸ್ಥರಾಗಿದ್ದ ಅದ್ವಿತೀಯ ಪ್ರಥಮರು. ಭಾರತಾಂಬೆಯ ಮಡಿಲ ಮಕ್ಕಳು ಸದಾ ಶುಭ್ರತೆ, ಶಿಸ್ತು ಮತ್ತು ಉತ್ತಮ ಶಿಕ್ಷಣ ಪಡೆಯಬೇಕು ಎಂದು ಹಂಬಲಿಸಿದವರು ಕಾರ್ಯಪ್ಪನವರು.

ಆ ದಿಸೆಯಲ್ಲಿ ಅವರು ತಮ್ಮ ಇಳಿ ವಯಸ್ಸಿನಲ್ಲೂ ಸೂಕ್ಷ್ಮ ದೃಷ್ಟಿಯಿಂದ ಮಕ್ಕಳನ್ನು ತಿದ್ದಿ ತಿಳಿ ಹೇಳುವ ಗುಣ ಸಂಪನ್ನರಾಗಿದ್ದರು.

ಭಾರತದ ಇತಿಹಾಸದಲ್ಲಿ ಮಹಾನ್ ಸೇನಾಧಿಪತಿ ಆಗಿ ದೇಶ ವಿದೇಶಗಳಲ್ಲಿ ಸೇವೆ ಸಲ್ಲಿಸಿದರೂ ತಮ್ಮ ಹುಟ್ಟೂರು ಕೊಡಗಿನಲ್ಲಿ ವಿಶ್ರಾಂತ ಜೀವನ ಕಳೆದು ಇತರರಿಗೆ ಮಾದರಿ ಆಗಿದ್ದರು. ಪ್ರತಿದಿನವು ಮಡಿಕೇರಿ ರಸ್ತೆಗಳಲ್ಲಿ ಗಾಂಭೀರ್ಯದ ಹೆಜ್ಜೆ ಹಾಕುತ್ತಾ ವಾಯು ವಿಹಾರ ನಡೆಸುತ್ತಿದ್ದರು. ಈ ವೇಳೆ ಯಾರಾದರೂ ಶಾಲಾ ಕಾಲೇಜು ವಿದ್ಯಾರ್ಥಿಗಳು ಹಾಗೂ ಯುವಕರು ಕಣ್ಣಿಗೆ ಕಾಣುವಾಗ ತಲೆ ಬಾಚದೆ ಅಂಗಿಯ ಗುಂಡಿ ಹಾಕದೆ ಶುಭ್ರ ವಸ್ತ್ರ ಧರಿಸದಿದ್ದರೆ ಕೈ ಉಗುರು ಮತ್ತು ಕೂದಲು ಇಲ್ಲವೇ ಮುಖ ಕ್ಷೌರ ಮಾಡದಿದ್ದರೆ ಗಂಭೀರ ಧ್ವನಿಯಲ್ಲಿ ಗದರಿಸಿ ಮೆಲ್ಲನೆ ಕೋಟು ಜೇಬಿನಿಂದ ತೆಗೆದ ಮಿಠಾಯಿ ಕೊಟ್ಟು ಕಳುಹಿಸುತ್ತಿದ್ದರು. ಹೀಗಾಗಿ ಅದೆಷ್ಟೋ ಸೋಕಿವಾಲಗಳು ಅಜ್ಜನ ಭಯದಿಂದ ಶಿಸ್ತಿಗೆ ಹೊಂದಿಕೊಳ್ಳುವುದು ಅನಿವಾರ್ಯ ಆಗಿತ್ತು.

ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ್ ನೆಹರು ನಡೆಯಿಂದ ಬೇಸರಗೊಂಡಿದ್ದ ಕಾರ್ಯಪ್ಪನವರು ರಾಜಕೀಯ ಬದಲಾವಣೆಯ ಆಶಯ ಹೊತ್ತು ಮುಂಬೈ ನಿಂದ ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದರು.


ಭಾರತ ಸೇನೆಯ ಮುಖ್ಯಸ್ಥರಾಗಿದ್ದ ವೇಳೆ ಅವರು ತಮ್ಮ ಹುಟ್ಟೂರು ಕೊಡಗಿನ ತಲಕಾವೇರಿಗೆ ಬಂದು ಶ್ರೀ ಕಾವೇರಿ ಮಾತೆಗೆ ಪ್ರಥಮವಾಗಿ ನಮಿಸಿದ ಬಳಿಕ ದೆಹಲಿಗೆ ಮರಳಿ ಅಧಿಕಾರ ಸ್ವೀಕಾರ ಮಾಡಿದ್ದು ಅವಿಸ್ಮರಣೀಯ ಕ್ಷಣ. ಅಲ್ಲದೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ದ್ವಿತೀಯ ಸರಸಂಘಚಾಲಕರಾಗಿದ್ದ ಶ್ರೀ ಗುರೂಜಿ ಅವರ ಒಡನಾಟದೊಂದಿಗೆ ವಿಶ್ವ ಹಿಂದೂ ಪರಿಷತ್ತಿನ ಧರ್ಮ ಸಂಸತ್ತು ಹಾಗೂ ಸಂತಶ್ರೇಷ್ಠರೊಡನೆ ಗೌರವ ಸಂಬಂಧ ಹೊಂದಿದ್ದರು. ಭಾರತದ ಅಭ್ಯುದಯ ಸಾಧಿಸಲು ದುಡಿಯುವ ವರ್ಗದ ಜನರು ಮತ್ತು ಭೂ ಮಾಲೀಕರೊಂದಿಗೆ ಉದ್ಯಮಿಗಳು ಉತ್ತಮ ಸಂಬಂಧ ಹೊಂದಿರುವಂತೆ ಕಾಳಜಿ ತೋರುತ್ತಿದ್ದರು.

## ಬಾಲ್ಯ ಜೀವನ

ಕೊಡಗಿನ ಪೊನ್ನಂಪೇಟೆ ಸಮೀಪದ ಕುಂದ ಗ್ರಾಮದ ಕೊಡಂದೇರ ಕುಟುಂಬಕ್ಕೆ ಸೇರಿದ ಕಾರ್ಯಪ್ಪಜ್ಜನವರು ಶನಿವಾರಸಂತೆಯಲ್ಲಿ ಕಂದಾಯ ಅಧಿಕಾರಿಯಾಗಿದ್ದ ಕೆ. ಎ. ಮಾದಪ್ಪ ಹಾಗೂ ಕಾವೇರಮ್ಮ ದಂಪತಿಯ ಪುತ್ರರಾಗಿ 1899ರ ಜನವರಿ 28ರಂದು ಜನಿಸಿದರು.ಬಳಿಕ ಮಾದಪ್ಪ ಅವರು ಮಡಿಕೇರಿಗೆ ವರ್ಗಾವಣೆಗೊಂಡಿದ್ದರಿಂದ ಸೆಂಟ್ರಲ್ ಹೈಸ್ಕೂಲ್ ನಲ್ಲಿ ವಿದ್ಯಾಭ್ಯಾಸ ನಡೆಸಿದರು. ಈ ವೇಳೆ ಕಾರ್ಯಪ್ಪ ಆಟ ಪಾಠಗಳಲ್ಲಿ ಸದಾ ಮುಂದಿದ್ದರು. ಎಲ್ಲರ ಮೆಚ್ಚುಗೆಗೆ ಪಾತ್ರರಾಗಿದ್ದು, ಮುಂದಿನ ಶಿಕ್ಷಣಕ್ಕೆ ಮದ್ರಾಸ್ ಪ್ರೆಸಿಡೆನ್ಸಿ ಕಾಲೇಜಿಗೆ ಸೇರ್ಪಡೆಗೊಂಡರು. 1914ರ ಈ ಕಾಲಘಟ್ಟದಲ್ಲಿ ಪ್ರಥಮ ವಿಶ್ವ ಯುದ್ಧದ ನಡುವೆ ಇವರು ಸೇನೆಗೆ ಸೇರ್ಪಡೆಗೊಂಡರು. ಸೇನೆಯಲ್ಲಿ ವಿವಿಧ ಹಂತದ ತರಬೇತಿ ಪಡೆದ ಈ ಸೇನಾನಿ ಬಹುಬೇಗ ಮುಂಬಡ್ತಿ ಹೊಂದಿ ಭಾರತದ ಗಡಿಯಾಚೆಗೂ ಹೋಗಿ ಇಂಗ್ಲೆಂಡ್ ಅಮೇರಿಕಾ ಜಪಾನ್ ಕೆನಡಾ ಆಫ್ರಿಕಾ ಚೀನಾ ಇರಾನ್ ಇರಾಕ್ ಸಿರಿಯಾ ಬರ್ಮಾ ಮುಂತಾದೆಡೆಗಳಲ್ಲಿ ಸೇವೆ ಸಲ್ಲಿಸುತ್ತಾ ವಿಶೇಷ ಗೌರವ ಪಡೆದರು. ಅಂತೆಯೇ 2ನೆಯ ವಿಶ್ವ ಮಹಾಯುದ್ಧ ಸಂದರ್ಭದಲ್ಲಿ ಪ್ರಪಂಚದ ಎಲ್ಲೆಡೆ ಸೇನಾ ನೇತೃತ್ವದಲ್ಲಿ ಶಾಂತಿ ಕಾಪಾಡಲು ಅದ್ಭುತ ಸಾಧನೆ ಮಾಡಿದರು.

## ಭಾರತಾಂಬೆಯ ಹೆಮ್ಮೆಯ ಸುಪುತ್ರ

ಬ್ರಿಟಿಷ್ ಸಾಮ್ರಾಜ್ಯ ಅಧಃ ಪತನಗೊಂಡು ಭಾರತವು ಸ್ವಾತಂತ್ರ್ಯ ಪಡೆದ ಸಂಕ್ರಮಣ ಕಾಲದಲ್ಲಿ ಸೇನೆಯ ಮುಖ್ಯಸ್ಥರಾಗಿ ಪದೋನ್ನತಿ ಪಡೆದ ಕೆ. ಎಂ. ಕಾರ್ಯಪ್ಪ ತಾಯಿ ಭಾರತಾಂಬೆಯ ಸೇವೆಗೆ ಟೊಂಕ ಕಟ್ಟಿ ನಿಂತರು. ಪಾಕ್ ವಿರುದ್ಧದ ಕಾರ್ಯಾಚರಣೆ ವೇಳೆ ತಮ್ಮ ಮಗನು ವಾಯುಪಡೆ ಸಮರದಲ್ಲಿ ಶತ್ರುಗಳ ವಶವಾದಾಗ ಅಲ್ಲಿನ ಸೇನಾ ಮುಖ್ಯಸ್ಥರು ಕಾರ್ಯಪ್ಪನವರನ್ನೂ ಸಂಪರ್ಕಿಸಿ, ಅವರ ಮಗನನ್ನು ಗೌರವಯುತವಾಗಿ ನಡೆಸಿಕೊಳ್ಳುವುದಾಗಿ ಸಂದೇಶ ರವಾನಿಸುತ್ತಾರೆ... ಈ ವೇಳೆ ಪ್ರತ್ಯುತ್ತರ ನೀಡುವ ನಮ್ಮ ಮಹಾನ್ ಸೇನಾನಿಯು ಇತರ ಭಾರತೀಯ ಯೋಧರಂತೆಯೇ ತಮ್ಮ ಪುತ್ರನನ್ನು ನೋಡಿದರೆ ಸಾಕು ಎಂದು ತಾಕೀತು ಮಾಡಿದ್ದರಂತೆ! ಇದು; ಎಲ್ಲ ಸೈನಿಕರಂತೆ ತಮ್ಮ ಮಗನನ್ನೂ ಕಾಣುತ್ತಿದ್ದರು ಎಂಬುದಕ್ಕೆ ಸಾಕ್ಷಿ. ಹೀಗಾಗಿ ಕಾರ್ಯಪ್ಪನವರು ಅಧಿಕಾರ ವಹಿಸಿಕೊಂಡ ದಿನ ಜನವರಿ 15 ನ್ನು ಇಂದಿಗೂ "ಸೇನಾ ದಿನ" ಎಂದು ಆಚರಿಸಲಾಗುತ್ತಿದೆ. ಸುದೀರ್ಘ



1969 ಉಡುಪಿಯ ವಿಶ್ವ ಹಿಂದು ಪರಿಷದ್ ಕರ್ನಾಟಕ ಪ್ರಾಂತ ಸಮ್ಮೇಳನದಲ್ಲಿ ಜನರಲ್ ಕಾರ್ಯಪ್ಪ

33 ವರ್ಷ ಸೇವೆಯೊಂದಿಗೆ ಅವರು 14.1.1953ರಂದು ನಿವೃತ್ತರಾದರು. ಅಲ್ಲದೆ ಅಪ್ರತಿಮ ಸಾಧನೆ ಹಾಗೂ ಸೇವೆಗಾಗಿ ದೇಶ ವಿದೇಶಗಳಲ್ಲಿ ಹಲವಾರು ಪುರಸ್ಕಾರದೊಂದಿಗೆ ಗೌರವಕ್ಕೆ ಭಾಜನರಾಗಿದ್ದಾರೆ. 1986ರಲ್ಲಿ ಭಾರತ ಸರ್ಕಾರ ಈ ವೀರ ಸೇನಾನಿಯ ಸೇವೆಗೆ ಫೀಲ್ಡ್ ಮಾರ್ಷಲ್ ಗೌರವ ನೀಡಿತು. 1993ರ ಮೇ 15ರಂದು ತಮ್ಮ 94ನೆಯ ವಸಂತದಲ್ಲಿ ಎಲ್ಲರಿಗೂ ಪ್ರೀತಿ ಪಾತ್ರರಾಗಿದ್ದ ಈ ಮಹಾನ್ ಚೇತನ ಇಹಲೋಕ ಯಾತ್ರೆ ಪೂರೈಸಿ ಭಾರತಾಂಬೆಯ ಅಮರ ಪುತ್ರರಾಗಿ ಪ್ರಾತಸ್ಮರಣೀಯರಾಗಿದ್ದು ನಮ್ಮ ಹೆಮ್ಮೆಯ ಸೇನಾ ಬಳಗದ "ಪಿತಾಮಹ" ಆಗಿದ್ದಾರೆ.

**ಫೀಲ್ಡ್ ಮಾರ್ಷಲ್ ಕಾರ್ಯಪ್ಪ ನವರ ಮಾತುಗಳು ಸದಾ ಮೆಲುಕು ಹಾಕುವಂತಹ ಉಲ್ಲೇಖಗಳು "ಜನರು; ದೇವರು ಹಾಗೂ ಸೈನಿಕರನ್ನು ತಮ್ಮ ಕಷ್ಟದ ಸಮಯದಲ್ಲಿ ಮಾತ್ರ ನೆನಪು ಮಾಡಿಕೊಳ್ಳುತ್ತಾರೆ. ದೇಶಕ್ಕೆ ಎದುರಾಗುವ ಯುದ್ಧ ಸಮಯ ಮತ್ತು ಜನರ ಕಷ್ಟ ಪರಿಹಾರ ಆದೊಡನೆ ದೇವರೊಂದಿಗೆ ಸೈನ್ಯವನ್ನೂ ಮರೆಯುತ್ತಾರೆ.."**

**"ನಮ್ಮ ಹೆಮ್ಮೆಯ ಕೊಡಗು ಅದೆಷ್ಟು ಸುಂದರ. ಇದು ಸರ್ವರಿಗೂ ಸಮಾನ ಬದುಕು ಕಟ್ಟಿಕೊಳ್ಳಲು ಅದೆಷ್ಟೋ ವಿಪುಲ ಅವಕಾಶ ಕಲ್ಪಿಸಿದೆ. ಇಲ್ಲಿನ ಸಂಸ್ಕೃತಿ ಪರಂಪರೆ ಎಲ್ಲ ಕಾಲಕ್ಕೂ ನಿತ್ಯ ನೂತನ ಆಗಿದೆ. ಇದು ದೇವರ ನಾಡು. ಸಂಸ್ಕೃತಿ ಪರಂಪರೆಯ ಬೀಡು. ಆಚಾರ ವಿಚಾರ ಪದ್ಧತಿ ವಿಶಿಷ್ಟ ಕಲೆ ಜಾನಪದ ನೃತ್ಯ ಸೌಂದರ್ಯ ಸಿರಿ ಸಂಪತ್ತು ಸಹಿತ ವನದೇವಿಯು ವಿಜೃಂಭಿಸಿದ ಸೀಮೆಯು ಕೊಡಗು ಸೀಮೆ."**

## ಕಾರ್ಯಕರ್ತರ ಗಮನಕ್ಕಾಗಿ

**ಹಿಂದುವಾಣಿಗಾಗಿ ಪರಿಷತ್ತಿನ ಕಾರ್ಯಕ್ರಮಗಳ ಭಾವಚಿತ್ರಗಳನ್ನು ಕಳುಹಿಸುವಾಗ:**

1. ಭಾವಚಿತ್ರಗಳು ಜೆ.ಪಿ.ಜಿ. ಸ್ವರೂಪ (jpg Format) ದಲ್ಲಿರಬೇಕು.
2. ಭಾವಚಿತ್ರಗಳನ್ನೆಲ್ಲಾ ಒಂದು ಕಡೆ ಸೇರಿಸಿ (Combined) ಕಳುಹಿಸಬಾರದು. ಪ್ರತ್ಯೇಕವಾಗಿ ಕಳುಹಿಸಬೇಕು.
3. ಚಲಿಸುವ ಚಿತ್ರಗಳಾಗಿರದೆ (Vidio), ನಿಶ್ಚಲ (Still Photo) ಭಾವಚಿತ್ರಗಳಾಗಿರಲಿ.

# ಶ್ರೀಕ್ಷೇತ್ರ ಗಾಣಗಾಪುರ

– ಪಾರಿಜಾತ ಬಿ.ಎಸ್., ಬೆಂಗಳೂರು



**“ಕೊರಡು ಸುರತರುವಾಯ್ತು ! ಬರಡು ನೆರೆಹಯವಾಯ್ತು,**
**ಮರುಳು ತಂಡಗಳು ಪ್ರಣವನುಚ್ಚರಿಸುವವು!**
**ಗುರುವಾಜ್ಞೆಗಂಜಿ ಸರ್ವಜ್ಞ”. !!**

ಗುರುಗಳ ಅಪ್ಪಣೆಯಾದರೆ ನಿರುಪಯೋಗಿಯಾದ ಆಕಳು ಕೂಡಾ ದೇವಲೋಕದ ಹಸು ಕಾಮಧೇನುವೇ ಆಗುವುದು. ಬಂಜೆ ಹಸುವು ಹಾಲು ಕೊಡುವಂತಾಗುವುದು. ಪಿಶಾಚಿಗಣಗಳ ಮೇಳವು ಭಕ್ತಿಪೂರ್ವಕವಾಗಿ ಪ್ರಣವ ಮಂತ್ರ ಜಪಾನುಷ್ಠಾನದಲ್ಲಿದ್ದೀತು ಎಂದು ವಚನಕಾರರಾದ ಸರ್ವಜ್ಞ ಕವಿಯು ನುಡಿದಿದ್ದಾರೆ.

“ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ” ಎಂಬುದು ಹಿರಿಯರ ಅನುಭವದ ಮಾತು. ಪ್ರತಿಯೊಬ್ಬರ ಜೀವನದಲ್ಲೂ ಯಾವುದೇ ಸಾಧನೆಗೆ ಮುಖ್ಯವಾದುದು ಉತ್ತಮ ಗುರುವಿನ ಮಾರ್ಗದರ್ಶನ. ಆ ಭಗವಂತನನ್ನು ಒಲಿಸಿಕೊಳ್ಳುವಷ್ಟು ಸುಲಭವಾಗಿ ಗುರು ಒಲಿಯುವುದಿಲ್ಲವೆಂಬುದು ಅನುಭವಿಗಳ ಮಾತು. ಅಂತೆಯೇ ಆ ಭಗವಂತನ ಸಾಕ್ಷಾತ್ಕಾರ, ಆತನ ಒಲಮೆಗೆ ಪಾತ್ರರಾಗಲು ಗುರುವಿನ ಅವಶ್ಯಕತೆ ಅಷ್ಟೇ ಮುಖ್ಯ. ಅಂತಹ ಅನೇಕ ಗುರುಗಳ, ಮಹಾತ್ಮರ, ಸಾಧಕರ ಪಾದಧೂಳಿನಿಂದ ಪವಿತ್ರವಾದ ಅನೇಕ ಪುಣ್ಯಕ್ಷೇತ್ರಗಳು ನಮ್ಮಲ್ಲಿವೆ. ಅಂತಹ ಪುಣ್ಯಕ್ಷೇತ್ರಗಳ ದರ್ಶನ ಹಾಗು ಗುರುವಿನ ದರ್ಶನ ಮಾತ್ರದಿಂದಲೇ ನಮ್ಮೆಲ್ಲಾ ಕಷ್ಟ ಕಾರ್ಪಣ್ಯಗಳು ದೂರಾಗುವುವು ಎಂಬುದು ನಂಬಿದ ಭಕ್ತರ


ಅಭಿಪ್ರಾಯ. ಇಂತಹ ಯತಿವರೇಣ್ಯರ ಪಾದಧೂಳಿನಿಂದ ಪವಿತ್ರವಾದ ಪುಣ್ಯಕ್ಷೇತ್ರಗಳಲ್ಲಿ ಒಂದಾದ ದತ್ತ ಪೀಠಗಳಲ್ಲೇ ಅತ್ಯಂತ ಪವಿತ್ರವಾದ ಗುರು ಪೀಠ "ಶ್ರೀ ಕ್ಷೇತ್ರ ಗಾಣಗಾಪುರ".

ಈ ಕ್ಷೇತ್ರವು ಕರ್ನಾಟಕ ರಾಜ್ಯದ ಗುಲ್ಬರ್ಗಾ ಜಿಲ್ಲೆಯಲ್ಲಿದ್ದು ಗುಲ್ಬರ್ಗಾ ಕೇಂದ್ರದಿಂದ 45 ಕಿ. ಮೀ ದೂರದಲ್ಲಿ ಭೀಮಾ ನದಿಯ ದಡದಲ್ಲಿದೆ. ದತ್ತ ಪೀಠಗಳಲ್ಲೇ ಪವಿತ್ರವಾದ ಸ್ಥಾನವನ್ನು ಹೊಂದಿದ್ದು, ಗುರು ದತ್ತಾತ್ರೇಯರ ಎರಡನೆಯ ಅವತಾರವಾದ ಶ್ರೀ ನರಸಿಂಹ ಸರಸ್ವತಿಗಳು ನೆಲೆಸಿದ ಪುಣ್ಯ ತಪೋಭೂಮಿಯಾಗಿದೆ. ಇಲ್ಲಿನ ಈ ಗುರುಸ್ಥಾನವನ್ನು ನಂಬಿ ಬರುವ ಭಕ್ತರ ಮನೋಭಿಷ್ಟಗಳನ್ನು ಈಡೇರಿಸುವ ಗಾಣಾಗಾಪುರವು ಅವರ ಪಾಲಿಗೆ ಪುಣ್ಯಕ್ಷೇತ್ರವಾಗಿದೆ. ಇಲ್ಲಿನ ಪ್ರಧಾನ ದರ್ಶನೀಯ ಕೇಂದ್ರವಾಗಿರುವುದು ಶ್ರೀ ನರಸಿಂಹ ಸರಸ್ವತಿಗಳ ನಿರ್ಗುಣ ಪಾದುಕೆಗಳು.

ಈ ಕ್ಷೇತ್ರದ ಭೀಮಾ–ಅಮರಜಾ ಸಂಗಮ ಸ್ಥಾನಕ್ಕೆ ಗುರುಚರಿತ್ರೆಯಲ್ಲಿ ಹೆಚ್ಚಿನ ಮಹತ್ವ ನೀಡಲಾಗಿದ್ದು, ತ್ರಿಕಾಲ ಪೂಜೆ ಅಭಿಷೇಕ, ಆರತಿಗಳು ಇಲ್ಲಿನ ವಿಶೇಷ ಕೈಂಕರ್ಯಗಳಾಗಿವೆ.

## ಇಲ್ಲಿನ ಪ್ರಮುಖ ಸ್ಥಳಗಳು

**ಸಂಗಮ :** ಮಠದಿಂದ ಸುಮಾರು 2 ಕಿ.ಮೀ ದೂರದಲ್ಲಿ ಭೀಮಾ–ಅಮರಜಾ ನದಿಗಳ ಸಂಗಮ ಸ್ಥಾನವಿದೆ. ಇದು ಪವಿತ್ರ ತೀರ್ಥವಾಗಿದ್ದು ಭಕ್ತರು ಇಲ್ಲಿ ಮಿಂದು ಪುನೀತರಾಗಿ ಔದುಂಬರ ಸೇವೆಯನ್ನು ಕೈಕೊಳ್ಳುವರು. ಗುರುಚರಿತ್ರೆ ಸಪ್ತಾಹ ಇತ್ಯಾದಿ ಪುಣ್ಯಕಾರ್ಯಗಳನ್ನು ನೆರವೇರಿಸುವುದು ವಾಡಿಕೆ. ಪೌರಾಣಿಕ ಹಿನ್ನೆಲೆಯ ಪ್ರಕಾರ ಹಿಂದೆ ಜಲಂಧರ ನೆಂಬ ರಾಕ್ಷಸನಿಗೂ ದೇವಾನು ದೇವತೆಗಳಿಗೂ ಯುದ್ಧ ಉಂಟಾಗಿ ಆ ರಾಕ್ಷಸನನ್ನು ಸಂಹರಿಸಲು ಎಷ್ಟೇ ಪ್ರಯತ್ನಿಸಿದರೂ ಆತನ ದೇಹದಿಂದ ಬಿದ್ದ ಒಂದೊಂದು ಹನಿ ರಕ್ತವು ಮತ್ತೆ ರಾಕ್ಷಸನಾಗಿ ಹುಟ್ಟಿಕೊಳ್ಳುತ್ತಿದ್ದಿತು. ಆಗ ಇಂದ್ರನು ಶ್ರೀ ಶಂಕರನ ಮೊರೆಹೋಗಿ ವಿಚಾರ ಮಾಡಲು ಶ್ರೀ ಶಂಕರನು ರುದ್ರನಾಗಿ ರಾಕ್ಷಸನ ಸಂಹಾರಕ್ಕೆ ಕಾರಣನಾದನಂತೆ. ಆಗ ಇಂದ್ರನು "ಪರಮೇಶ್ವರನೇ ರಾಕ್ಷಸನನಂತೂ ಸಂಹರಿಸಿದೆ. ಆದರೆ ಅವನಿಂದ ಹತರಾದ ದೇವತೆಗಳನ್ನು ಮತ್ತೆ ಬದುಕಿಸು" ಎನ್ನಲು ಶಂಕರನು ಒಂದು ಕುಂಭದಲ್ಲಿ ಮಕರಂದವನ್ನು ನೀಡಿ ಅದನ್ನು ಹತರಾದ ದೇವತೆಗಳ ಶರೀರದ ಮೇಲೆ ಸಿಂಪಡಿಸಲು ತಿಳಿಸಿದನು. ಅದರಂತೆ ಇಂದ್ರನು ನಡೆಯಲು ದೇವತೆಗಳು ಎಚ್ಚರಗೊಂಡರು. ನಂತರ ಉಳಿದ ಮಕರಂದವನ್ನು ಇಂದ್ರನು ತೆಗೆದುಕೊಂಡು ಹೋಗುತ್ತಿರುವಾಗ ಆಕಸ್ಮಿಕವಾಗಿ ಅದರಲ್ಲಿನ ಮಕರಂದದ ಹನಿಗಳು ಈ ಕ್ಷೇತ್ರದ ತೀರ್ಥದಲ್ಲಿ ಬಿದ್ದು ಸೇರಲು ಅದು ಅಮರಜಾ ತೀರ್ಥವೆನಿಸಿ ಇಂದಿಗೂ ಇದರಲ್ಲಿ ಮಿಂದು ಪವಿತ್ರರಾಗುವ ಭಕ್ತರು ಅನೇಕ ರೋಗರುಜಿನಗಳಿಂದ ಹಾಗು ಮುಖ್ಯವಾಗಿ ಮಾರಣಾಂತಿಕ ಭಯದಿಂದ ದೂರಾಗುವರೆಂಬ ನಂಬಿಕೆ ಇದೆ.



**ಔದುಂಬರ ವೃಕ್ಷ:** ಇದು ಗುರುದತ್ತರ ಸಾನ್ನಿಧ್ಯವೆಂಬ ನಂಬಿಕೆಯಿಂದ ಸಂಗಮದಿಂದ ನೀರು ತಂದು ವೃಕ್ಷದ ಬುಡಕ್ಕೆ ಸುರಿದು ವೃಕ್ಷಕ್ಕೆ ವಿಶೇಷ ಪೂಜೆ ಹರಕೆ ಸಲ್ಲಿಸಲಾಗುತ್ತದೆ. 'ದಿಗಂಬರ ಶ್ರೀ ಪಾದವಲ್ಲಭ ದಿಗಂಬರ' ಎಂಬ ಮಂತ್ರೋಚ್ಚಾರಣೆಯೊಂದಿಗೆ 11, 21, 108 ಬಾರಿ ಪ್ರದಕ್ಷಿಣೆ ಮಾಡಿ ಸೇವೆ ಸಲ್ಲಿಸಲಾಗುತ್ತದೆ. 7 ದಿನಗಳ ಗುರು ಚರಿತ್ರೆ ಪಾರಾಯಣವನ್ನು ಈ ವೃಕ್ಷದ ಸಮೀಪ ನಡೆಸುವುದರಿಂದ ಭಕ್ತರ ಮನೋಭಿಷ್ಟಗಳು ನೆರವೇರುವುವು.

**ಅಷ್ಟತೀರ್ಥ:** ಭೀಮಾ–ಅಮರಜಾ ನದಿಗಳ ಸಂಗಮಕ್ಕೂ ಕಲ್ಲೇಶ್ವರ ದೇಗುಲಕ್ಕೂ ನಡುವೆ ಈ ತಾಣವಿದ್ದು ಪಾಪವಿನಾಶ, ನರಸಿಂಹ, ವಾರಣಾಸಿ, ರುದ್ರಪಾದ, ಚಕ್ರತೀರ್ಥ, ಕೋಟಿತೀರ್ಥ, ಮನ್ಮಥ, ಭಾಗೀರಥಿ ಒಳಗೊಂಡ ಅಷ್ಟತೀರ್ಥವು ಭಕ್ತರ ಮನದಲ್ಲಿ ಪವಿತ್ರತೆಯ ಭಾವವನ್ನು ತುಂಬುತ್ತದೆ.

**ಸಂಗಮನಾಥೇಶ್ವರ:** ಸಂಗಮದ ಪಕ್ಕದಲ್ಲೇ ಇರುವ ಸಂಗಮನಾಥೇಶ್ವರ ದೇಗುಲವಿದು. ಪವಿತ್ರ ತೀರ್ಥಸ್ನಾನದ ನಂತರ ಗಣಪನನ್ನು ಸಂದರ್ಶಿಸಿ ನಂತರ ಸಂಗಮೇಶ್ವರನ ದರ್ಶನ ಮಾಡುವುದು ಪದ್ಧತಿ.

**ಕಲ್ಲೇಶ್ವರ:** ಸಂಗಮನಾಥನ ನಂತರ ಕಲ್ಲೇಶ್ವರನ ದರ್ಶನ ಪುಣ್ಯಕಾರಿ.

**ಚಿಂತಾಮಣಿ ಗಣಪ:** ಗುರುಗಳ ಪಾದುಕಾ ದರ್ಶನ ಮಾಡುವ ಮುನ್ನ ಈ ಚಿಂತಾಮಣಿ ಗಣಪನನ್ನು ದರ್ಶನ ಮಾಡಿ ನಂತರ ಮುಂದುವರೆಯಲಾಗುತ್ತದೆ. ಹಿಂದೆ ನರಸಿಂಹ ಸರಸ್ವತಿ ಯತಿಗಳು ಮೊದಲು ಈ ಗಣಪನನ್ನು ಇಲ್ಲಿ ಪ್ರತಿಷ್ಠಾಪಿಸಿ ಪೂಜಿಸಿದರಂತೆ. ಅಂತೆಯೇ ಈತನ ದರ್ಶನ ಪ್ರಮುಖವಾಗಿದೆ.



**ನಿರ್ಗುಣ ಪಾದುಕಾ ಮಂದಿರ:** ಇದು ಅತ್ಯಂತ ಪವಿತ್ರವಾದ ಸ್ಥಾನವಾಗಿದ್ದು, ಗುರು ನರಸಿಂಹ ಸರಸ್ವತಿ ಯತಿಗಳು ಮಠವನ್ನು ಬಿಟ್ಟು ಹೋಗುವಾಗ ತಮ್ಮ ಪಾದುಕೆಗಳನ್ನು ಇಲ್ಲಿ ಬಿಟ್ಟು ಹೋದರು. ಆ ಪಾದುಕೆಗಳೇ ಇಂದಿಗೂ ಮಠದಲ್ಲಿ ನಿರ್ಗುಣ ದತ್ತ ಪಾದುಕೆಗಳಾಗಿ ಇಲ್ಲಿನ ಪ್ರಮುಖ ಭಕ್ತಿಯ ಮೂಲವಾಗಿದೆ. ಅಂತೆಯೇ ಈ ಮಂದಿರವನ್ನೂ ನಿರ್ಗುಣ ಮಠವೆಂದು ಕರೆಯಲಾಗುತ್ತದೆ.

**ಇಲ್ಲಿನ ವಿಶೇಷ ಸೇವೆ ಪೂಜಾ ಕೈಂಕರ್ಯಗಳು:** ಕಾಕಡಾರತಿ: ಗುರು ಪರಂಪರೆಯಲ್ಲಿ ಆರತಿಗಳಿಗೆ ಹೆಚ್ಚಿನ ಮಹತ್ವ ನೀಡಲಾಗುತ್ತದೆ. ಅದರಲ್ಲೂ ಕಾಕಡಾರತಿಯು ದಿನದ ಪ್ರಥ ಮಾರತಿ. ಇಲ್ಲಿಯೂ ಸಹ ಕಾಕಡಾರತಿಗೆ ಪ್ರಥಮ ಪ್ರಾಶಸ್ತ್ಯ. ಈ ಆರತಿಯ ದರ್ಶನಕ್ಕಾಗಿ ಭಕ್ತರು ಕಾದಿರುತ್ತಾರೆ. ಇಲ್ಲಿ ಪ್ರತಿನಿತ್ಯ ಬೆಳಿಗ್ಗೆ 3 ಗಂಟೆಗೆ ಕಾಕಡಾರತಿ, 4.30 ಕ್ಕೆ ಗುರು ನರಸಿಂಹರು ಪೂಜಿಸುತ್ತಿದ್ದ ಸಾಲಿಗ್ರಾಮಗಳಿಗೆ ಪೂಜೆ, ದರ್ಶನ, ಮಹಾಮಂಗಳಾರತಿ ಸಲ್ಲಿಸಲಾಗುತ್ತದೆ. ನಂತರ ನಿರ್ಗುಣ ಪಾದುಕೆಗಳಿಗೆ ರುದ್ರಾಭಿಷೇಕ, ಕೇಸರಿಯುಕ್ತ ಗಂಧಾಭಿಷೇಕ(ಲೇಪನ) ನಡೆಸಲಾಗುತ್ತದೆ.

**ಮಧ್ಯಾಹ್ನಪೂಜೆ:** ಮಧ್ಯಾಹ್ನ ಪಾದುಕೆಗಳಿಗೆ ಹೋಳಿಗೆ ನೈವೇದ್ಯ, ಮಹಾಮಂಗಳಾರತಿ, ಪಾದುಕಾ ಪೂಜೆ ನಡೆಯುತ್ತದೆ.

**ಸಾಯಂಕಾಲ ಪೂಜೆ:** ಮಧ್ಯಾಹ್ನ 2 ರಿಂದ ಪಾದುಕಾ ದರ್ಶನಕ್ಕೆ ಅವಕಾಶವಿರುವುದಿಲ್ಲ. ಈ ಸಮಯದಲ್ಲಿ ಶ್ರೀ ದತ್ತಾತ್ರೇಯರಿಗೆ ಪೂಜೆ ವಿಶೇಷ ಅಲಂಕಾರ. ಪ್ರತಿನಿತ್ಯ ಸಂಜೆ ಪಲ್ಲಕ್ಕಿ ಉತ್ಸವ ಅಷ್ಟಾವಧಾನ ಸೇವೆಗಳನ್ನು ನೆರವೇರಿಸಲಾಗುತ್ತದೆ.

**ಮಧುಕರಿ ಭಿಕ್ಷೆ; ಸಮತಾಭಾವ:** ಇಲ್ಲಿಗೆ ಬರುವ ಭಕ್ತರು ಯಾವ ಭೇಧಭಾವವಿಲ್ಲದೆ ನೀಡುವ ತೆಗೆದುಕೊಳ್ಳುವ ಮಧುಕರಿ ಭಿಕ್ಷೆ ಸಮತಾಭಾವಕ್ಕೆ ಸಾಕ್ಷಿಯಾಗಿದೆ. ಕಾರ್ತಿಕ ತ್ರಿಪುರಿ ಪೂರ್ಣಿಮೆಯ ದಿನ ಸಂಗಮದಲ್ಲಿ ವಿಶೇಷ ಪೂಜೆ ಉತ್ಸವ, ಜರುಗುತ್ತದೆ. ಹಿಂದು ಮುಸ್ಲಿಂ ಎನ್ನದೆ ಭಕ್ತರು ಕಾರ್ತಿಕ ಪ್ರತಿಪದೆಯಂದು ಪಲ್ಲಕ್ಕಿ ಉತ್ಸವದಲ್ಲಿ ಪಾಲ್ಗೊಳ್ಳುತ್ತಾರೆ. ಈ ಸಮಯದಲ್ಲಿ ಪೂಜಾ ಕೈಂಕರ್ಯದ ನಂತರ ರೊಟ್ಟಿ ಮತ್ತು ಪುಂಡಿ ಪಲ್ಯ ಪ್ರಸಾದ ಸವಿಯುತ್ತಾರೆ.

**ವಿಶೇಷ ದಿನಗಳ ಪೂಜೆ:** ಗುರುಪಾಡ್ಯಮಿಯಂದು ದತ್ತಾತ್ರೇಯ ಜಯಂತಿಯಂದು, ದೀಪಾವಳಿ ದಸರಾ ಸಮಯದಲ್ಲಿ ವಿಶೇಷ ಪೂಜಾ ಕೈಂಕರ್ಯಗಳು ಜರುಗುತ್ತವೆ,

## ಯಾತ್ರಿಕರಿಗೆ ವಿಶೇಷ ಮಾಹಿತಿ

- ಈ ಕ್ಷೇತ್ರವು ಬೆಂಗಳೂರಿನಿಂದ ಸುಮಾರು 612 ಕಿ/ಮೀ ದೂರದಲ್ಲಿದೆ.
- ಇಲ್ಲಿಗೆ ಸರ್ಕಾರಿ ಖಾಸಗೀ, ವಾಹನ ವ್ಯವಸ್ಥೆ ಇದೆ, ರೈಲ್ವೆ, ವ್ಯವಸ್ಥೆಯೂ ಇದೆ.
- ಇಲ್ಲಿ ಸುಸಜ್ಜಿತ ವಸತಿ ಮಂದಿರಗಳ ವ್ಯವಸ್ಥೆಯೂ ಇದೆ.
- ಮಠವು ಬೆಳಿಗ್ಗೆ 3 ರಿಂದ ಮಧ್ಯಾಹ್ನ 2 ರವರೆಗೆ ಹಾಗು ದತ್ತಾತ್ರೇಯ ದೇಗುಲವು ಬೆಳಿಗ್ಗೆ 6–.30 ರಿಂದ ಸಂಜೆ 9 ರವರೆಗೂ ತೆರೆದಿರುತ್ತದೆ, ಕಾಕಡಾರತಿಯು ಬೆಳಿಗ್ಗೆ 3 ಗಂಟೆಗೆ ಜರಗುತ್ತದೆ.
- ಸಂಜೆ ದತ್ತಾತ್ರೆಯರಿಗೆ 7.–30 ರಿಂದ 9 ರವರೆಗೂ ಪಲ್ಲಕ್ಕಿ ಉತ್ಸವ ನಡೆಯುತ್ತದೆ.
- ದತ್ತ ಕ್ಷೇತ್ರದಲ್ಲಿ ಮಧುಕರಿ ಸೇವೆಗೆ ಪ್ರಮುಖ ಸ್ಥಾನವಿದ್ದು ಅವಕಾಶವಿದೆ.
- ಇಲ್ಲಿಗೆ ಅಕ್ಕಲಕೋಟೆ, ಪಂಡರಾಪುರ, ತುಳಜಾಪುರ ಹತ್ತಿರವಿರುವ ಪ್ರಸಿದ್ಧ ಯಾತ್ರಾ ಸ್ಥಳಗಳು.
- ಇಲ್ಲಿಯೇ ತಂಗಿ ಗುರುಚರಿತ್ರೆಯ ಸಪ್ತಾಹ ನಡೆಸುವುದು ಇಲ್ಲಿನ ವಿಶೇಷ ಕೈಂಕರ್ಯಗಳಲ್ಲಿ ಒಂದು.
- ಇಲ್ಲಿ ಭೂತ ಪ್ರೇತ ಭಯ, ಚರ್ಮವ್ಯಾಧಿಗೆ ಒಳಗಾದ ಭಕ್ತರು ಸೇವೆಸಲ್ಲಿಸಿದರೆ ಬೇಗ ಗುಣಮುಖರಾಗುವರೆಂಬ ನಂಬಿಕೆ ಇದೆ.
- ಇಲ್ಲಿನ ಸೇವೆಗಳ ಬಗ್ಗೆ ಹೆಚ್ಚಿನ ಮಾಹಿತಿಗೆ 08470–274768, 08470–2335, 8472–230495 ಸಂಪರ್ಕಿಸಬಹುದು.

■

# ಮತ್ತಷ್ಟು ಬೇಕೇ?

**– ಶಾರದಾ ವಿ. ಮೂರ್ತಿ**
ಮೈಕೋ ಬಡಾವಣೆ, ಬೆಂಗಳೂರು

ವೈಶಾಖ ಶುಕ್ಲ ತೃತೀಯದಂದು ನಾವೆಲ್ಲರೂ ಭಕ್ತಿಭಾವದಿಂದ ಆಚರಿಸುವ ಹಬ್ಬ "ಅಕ್ಷಯ ತೃತೀಯ". ಅಕ್ಷಯ ಎಂಬ ಪದವೇ ಮನಸ್ಸಿಗೆ ಸಂತೋಷವನ್ನು ಉಂಟುಮಾಡುವಂತೆ, ಅಂದು ಎಲ್ಲಾ ಒಳ್ಳೆಯ ಕೆಲಸಗಳಿಗೂ, ಪೂಜೆ ಪುನಸ್ಕಾರಗಳಿಗೂ, ದಾನ ಧರ್ಮಗಳಿಗೂ ಪ್ರಶಸ್ತವಾದ ದಿನ. ಆ ದಿನ ಮಾಡುವ ಸತ್ಕಾರ್ಯಗಳಿಗೆ ಹೆಚ್ಚಿನ ಫಲ ಸಿಗುತ್ತದೆಂಬ ನಂಬಿಕೆಯಿದೆ. ನಾಲ್ಕು ಧಾಮಗಳಲ್ಲಿ ದೇವರ ದರ್ಶನಕ್ಕಾಗಿ ಅಂದಿನ ದಿನದಿಂದ ಭಕ್ತರಿಗೆ ಬಾಗಿಲು ತೆರೆಯಲಾಗುತ್ತದೆ. ಯಾವುದೇ ಮಂಗಳ ಕಾರ್ಯಗಳನ್ನು ಮಾಡಲು ಶುಭದಿನವಾದ್ದರಿಂದ ಅಂದು ಗೃಹ ಪ್ರವೇಶ, ಅಂಗಡಿಗಳ ಆರಂಭ, ಮದುವೆ, ಉಪನಯನದಂತಹ ಸಮಾರಂಭಗಳು ನಡೆಯುತ್ತವೆ.

ಅಂದು ನಾರಾಯಣನ ಅವತಾರವಾದ 'ಪರಶುರಾಮ' ಜಯಂತಿ. ತ್ರೇತಾಯುಗದ ಆರಂಭದ ದಿನವೂ ಅಂದೇ ಆಗಿದ್ದಂತೆ. ಗಂಗಾಮಾತೆ ಧರೆಗಿಳಿದು ಭೂಲೋಕದ ಜನರನ್ನು ಪಾವನಗೊಳಿಸಿದ್ದು ಇದೇ ದಿನದಂದು. ವ್ಯಾಸರು ಮಹಾಭಾರತವನ್ನು ಹೇಳುತ್ತಾ ಹೋದಂತೆ ಅದನ್ನು ಗಣೇಶ ಬರೆದದ್ದು ಇದೇ ದಿನವಂತೆ. ಸುದಾಮ ತನ್ನ ಬಾಲ್ಯಮಿತ್ರ ಕೃಷ್ಣನನ್ನು ದ್ವಾರಕೆಯಲ್ಲಿ ಭೇಟಿ ಮಾಡಿದ್ದು. ಕೃಷ್ಣನ ಕೃಪೆಯಿಂದ ದಾರಿದ್ರ್ಯ ಕಳೆದು ಶ್ರೀಮಂತನಾದದ್ದು ಅಂದು. ಕುಬೇರ ಸ್ವರ್ಗದಲ್ಲಿ ಸಂಪತ್ತಿನ ಒಡೆಯನಾಗಿದ್ದುದೂ ಅಂದೇ ಅಂತೆ.

ಪಾಂಡವರ ವನವಾಸದ ಸಮಯದಲ್ಲಿ ಯುಧಿಷ್ಠಿರನು ಸೂರ್ಯನನ್ನು ಪ್ರಾರ್ಥಿಸಿಕೊಂಡಾಗ ಸೂರ್ಯ ಕರುಣಿಸಿದ್ದು ಅಕ್ಷಯ ಪಾತ್ರೆಯನ್ನು. ಅವರೆಲ್ಲರಿಗೂ ಮಧ್ಯಾಹ್ನ ಊಟ ಮಾಡಲು, ಮತ್ತು ಆ ಸಮಯದಲ್ಲಿ ಎಷ್ಟೇ ಅತಿಥಿಗಳಿದ್ದರೂ ಆ ಪಾತ್ರೆಯಲ್ಲಿ ಭೋಜನ ಅಕ್ಷಯವಾಗುತ್ತದೆ. ಆದರೆ ಒಮ್ಮೆ ಊಟವಾಗಿ ಪಾತ್ರೆ ಖಾಲಿಯಾಗಿ ತೊಳೆದ ನಂತರ ಮರುದಿನದವರೆಗೂ ಆ ಪಾತ್ರೆಯಿಂದ ಅಕ್ಷಯವಾಗದು. ಅಂದರೆ ಅವಶ್ಯಕತೆಯಿದ್ದಾಗ ಅಕ್ಷಯ ಭಾಗ್ಯ ಕರುಣಿಸುವ ಪಾತ್ರೆ ದುರಾಶೆಯಿಂದ ಪದೇ ಪದೇ ಕೇಳಿದರೆ ಆಹಾರವನ್ನು ಒದಗಿಸದು.

ಅದರಂತೆ ಆ ದಿನ ಚಿನ್ನ ಖರೀದಿಸಿದರೆ ಮನೆಯಲ್ಲಿ ವೃದ್ಧಿಯಾಗುತ್ತದೆ. ಲಕ್ಷ್ಮೀ ನೆಲಸುತ್ತಾಳೆ, ಎಂಬ ನಂಬಿಕೆಯಂತೂ ದಟ್ಟವಾಗಿ ವ್ಯಾಪಿಸಿದೆ. ಆದ್ದರಿಂದಲೇ ಅಕ್ಷಯ ತದಿಗೆಯಂದು ಚಿನ್ನದ ಅಂಗಡಿಗಳಿಗೆ ವ್ಯಾಪಾರವೋ ವ್ಯಾಪಾರ. ಎಷ್ಟೇ ಕಷ್ಟವಾದರೂ ಅಂದು ಹೇಗಾದರೂ ಚಿನ್ನ ಕೊಳ್ಳಲೇಬೇಕೆಂಬುದನ್ನು ಅನೇಕರು ಸಂಪ್ರದಾಯವಾಗಿಸಿಕೊಂಡಿದ್ದಾರೆ. ಹಿಂದಿಗಿಂತ ಇತ್ತೀಚೆಗೆ ಈ ನಂಬಿಕೆ ಹೆಚ್ಚಲು ಕಾರಣ ವ್ಯಾಪಾರಸ್ಥರು ವ್ಯವಸ್ಥಿತವಾಗಿ ಮಾಡುತ್ತಿರುವ ಪ್ರಚಾರದ ಪ್ರಭಾವವೇ ಇದ್ದೀತು!.



ನಂಬುವವರು ಇರುವಾಗ ನಾನಾ ರೀತಿಯ ಜಾಹಿರಾತುಗಳ ಮೂಲಕ ಮರುಳು ಮಾಡಲು ವ್ಯಾಪಾರಸ್ಥರು ಯತ್ನಿಸುತ್ತಾರೆ. ಅದು ಅವರ ವೃತ್ತಿ ಧರ್ಮ. ಜನರು ಚಿನ್ನದ ಅಂಗಡಿಗಳಿಗೆ ಹೇಗೆ ಹೋಗುತ್ತಾರೆಂದರೆ ಅಂಗಡಿಯ ಮಾಲಿಕರು ಮೊದಲೇ ಅಂದಿನ ದಿನಕ್ಕೆ ಕೊಳ್ಳಲು ಸರದಿಯ ಪ್ರಕಾರ ಟೋಕನ್ ವ್ಯವಸ್ಥೆ ಮಾಡಿರುತ್ತಾರೆ. ಹೆಚ್ಚಿನ ಹಣ ಕೊಟ್ಟು, ಗಂಟೆಗಟ್ಟಲೆ ಸರದಿಯಲ್ಲಿ ನಿಂತು. ಜನಜಂಗುಳಿಯಲ್ಲಿ ಬೇಕಾದುದನ್ನು ಆಯ್ಕೆ ಮಾಡಿಕೊಳ್ಳುವ ಅವಕಾಶ ಇಲ್ಲದೇ ಹೋದರೂ, ಅಂತೂ ಚಿನ್ನ ಕೊಂಡಾಗ ಸಂತೃಪ್ತಿಯ ನಗೆ ಬೀರುತ್ತಾರೆ. ಇನ್ನು ತಮ್ಮ ಮನೆಯಲ್ಲಿ ಲಕ್ಷ್ಮಿ ಕನಕಧಾರೆ ಸುರಿಸುತ್ತಾ ಶಾಶ್ವತವಾಗಿ ನೆಲೆಸುತ್ತಾಳೆ. ಎಂಬ ವಿಶ್ವಾಸವು ಅವರಿಗೆ ಅತೀವ ಸಂತೋಷವಾಗಿಸುತ್ತದೆ. ಎಷ್ಟೆಷ್ಟು ಖರೀದಿಸುತ್ತಿದ್ದೇವೆ ಎಂಬುದು ಕೆಲವರಿಗೆ ಪ್ರತಿಷ್ಠೆಯ ಸಂಕೇತವಾದರೆ ಮತ್ತೆ ಕೆಲವರು ತಾವು ಕೊಂಡಿದ್ದನ್ನು ರಹಸ್ಯವಾಗಿಡುತ್ತಾರೆ.

ಒಟ್ಟಾರೆ ಹೆಣ್ಣು, ಹೊನ್ನು, ಮಣ್ಣಿನ ವ್ಯಾಮೋಹ ಎಂದಿನಿಂದಲೂ ಇದ್ದಿದ್ದೇ! ಯಾರದಾದರೂ ಸಿರಿ ಸಂಪತ್ತನ್ನು ವರ್ಣಿಸುವಾಗ, ಭವ್ಯ ಕಟ್ಟಡಗಳ ಬಗ್ಗೆ ಹೇಳುವಾಗ ಅಲ್ಲಿ ಚಿನ್ನಕ್ಕೆ ಹೆಚ್ಚಿನ ಪ್ರಾಶಸ್ತ್ಯ. ಚಿನ್ನ ಹಾಗೂ ಸಂಪತ್ತಿನ ಮೋಹದಿಂದ, ಅದರ ಪ್ರಾಪ್ತಿಗಾಗಿ ಕ್ರೂರ ವಿಧಾನಗಳನ್ನು ಅನುಸರಿಸಿ, ನಕಲಿ ಪೂಜಾರಿ ಹೇಳಿದ ನರಬಲಿ, ಪ್ರಾಣಿ ಬಲಿಗಳನ್ನು ಕೊಟ್ಟವರೂ ಉಂಟು.

ಹಿಂದೆ ನಮ್ಮಲ್ಲಿದ್ದ ಅಪಾರ ಚಿನ್ನ, ಸಂಪತ್ತನ್ನು ಕೊಳ್ಳೆಹೊಡೆಯಲೆಂದೇ ವಿದೇಶೀ ಆಕ್ರಮಣಕಾರರು ಸಾಲು ಸಾಲಾಗಿ ಬಂದಿದ್ದು; ಲೂಟಿ ಮಾಡಿದ್ದು, ಕೊಳ್ಳೆ ಹೊಡೆದಿದ್ದು, ಧೂರ್ತತನ ಮೆರೆದಿದ್ದು; ಕೊನೆಗೆ ನಮ್ಮ ಸ್ವಾತಂತ್ರ್ಯವನ್ನೇ ಕಿತ್ತುಕೊಂಡಿದ್ದು ಇತಿಹಾಸ. ಒಟ್ಟಾರೆ ಹಳದಿ ಲೋಹ ಹಣಾಹಣಿಗೆ ಕಾರಣವಾಗುತ್ತಲೇ ಬಂದಿದೆ. ಹಣ ಇದ್ದವರಿಗೂ,

ಇಲ್ಲದವರಿಗೂ, ಬೇಕೆಂಬ ಮೋಹವಂತೂ ಬಿಡದು, ಇದ್ದವರಿಗೂ ಎಷ್ಟಿದ್ದರೆ ಸಾಕು? ಮಕ್ಕಳಿಗೆ, ಮೊಮ್ಮಕ್ಕಳಿಗೆ, ತಲತಲಾಂತರ ಪೀಳಿಗೆಗೆ ಇರಲಿ ಎಂಬ ವ್ಯಾಮೋಹ, ಸಿರಿವಂತಿಕೆಯ ಕನಸು.

ನಾವು ಇಡೀ ದಿನ ಪ್ರಾಮಾಣಿಕವಾಗಿ, ಮೈಮುರಿದು ದುಡಿದರೂ ಅಷ್ಟೇ! ಎಂದು ಹತಾಶರಾದವರಿಗೆ ಯಾರಾದರೂ ಹಣ ದ್ವಿಗುಣವಾಗುವ ಮಾರ್ಗ ತೋರಿಸಿಕೊಟ್ಟರೆ, ದಿಢೀರನೆ ಶ್ರೀಮಂತರಾಗುವ ಉಪಾಯ ತಿಳಿಸಿದರೆ, ಆಸೆ ಹುಟ್ಟದೆ ಬಿಡುವುದೇ? ತಾನಾಗಿಯೇ ಬಂದ ಸದವಕಾಶವನ್ನು ಮೂರ್ಖರಂತೆ ತಳ್ಳಿ ಹಾಕಲಾಗುತ್ತದೆಯೇ? ಪ್ರಲೋಭನೆಗಳು ನಮ್ಮ ಮುಂದಿರುವಾಗ ಬೇಡವೆಂಬ ನಮ್ಮ ನಿರ್ಧಾರ ಜಾರಿಹೋಗಿ ಬಿಡುತ್ತದೆ.

ನಮ್ಮ ಪರಿಚಿತರೊಬ್ಬರಿಗೆ ಫೋನಿನಲ್ಲಿ ಲಿಂಕ್ ಹಾಗೂ ಅದರ ಕೆಳಗೆ ಎರಡು ಸಾಲಿನ ಮಾಹಿತಿಯೂ ಇತ್ತು. ಅವರು ಅದನ್ನು ಒತ್ತಿ ಓದಿದಾಗ ಅಚ್ಚರಿ ಕಾದಿತ್ತು. ಅವರು ಕೊಟ್ಟಿರುವ ಫೋನ್ ನಂಬರ್‌ಗೆ ಹಣ ಹಾಕಿದರೆ ಒಂದು ವಾರದಲ್ಲೇ ಹಣ ದ್ವಿಗುಣವಾಗುತ್ತದೆ. ಹಾಗೂ ಅವರು ಕೊಡುವ ಅಕೌಂಟ್ ನಂಬರ್‌ಗೆ ಹಣ ಜಮೆಯಾಗುತ್ತದೆ. ಎಂಬ ಸಂದೇಶವಿತ್ತು.

ಅಚ್ಚರಿಯ ವಿಷಯವೆಂದರೆ ಅವರ ಆತ್ಮೀಯ ಗೆಳೆಯನಿಗೂ ಅಂದು ಫೇಸ್‌ಬುಕ್‌ನಲ್ಲಿ ಇಂತಹುದೇ ಒಂದು ಲಿಂಕ್ ಸಿಕ್ಕಿತ್ತಂತೆ. ಗೆಳೆಯರಿಬ್ಬರೂ ತಮ್ಮಲ್ಲೇ ಚರ್ಚಿಸಿಕೊಂಡು ಕೊನೆಗೂ ಪರೀಕ್ಷಿಸಲೆಂದು ಸಣ್ಣ ಮೊತ್ತದ ಹಣವನ್ನು ಹಾಕಿದ್ದರು. ಮೋಸವಾಗದೆ ದಿಟವೇ ಆಯಿತು. ನೂರು ಹಾಕಿದ ಇಬ್ಬರಿಗೂ ಇನ್ನೂರು ರೂಗಳು ಸಂದಾಯವಾಗಿದ್ದವು. ಇಬ್ಬರೂ ಖುಷಿಯಿಂದ ಸಾವಿರ ಅದಕ್ಕೆ ಎರಡು ಸಾವಿರ ಬಂದ ನಂತರ, ಹತ್ತು ಸಾವಿರ ಇಪ್ಪತ್ತು ಸಾವಿರ ಹೀಗೆ ಹಾಕಿದಂತೆಲ್ಲಾ ಹಣ ದುಪ್ಪಟ್ಟು ಬರತೊಡಗಿತ್ತು. ಕೊನೆಗೆ ಅದರಲ್ಲಿ ಒಬ್ಬರು ಲಕ್ಷ ಹಣ ಹಾಕುವ ಮನಸ್ಸು ಮಾಡಿಯೇ ಬಿಟ್ಟರು. ಆ ಮೊತ್ತ ಹಣ ಹಾಕಿದ ಬಗ್ಗೆ ತುಸು ಎದೆ ಢವಗುಟ್ಟು ತೊಡಗಿತ್ತು. ಇಲ್ಲೂ ಮೋಸವಾಗಲಿಲ್ಲ. ಎರಡು ಲಕ್ಷರೂ. ಜಮೆ ಆಯಿತು. ನಂಬಿಕೆ ಗಟ್ಟಿಯಾಯಿತು.

"ಇದು ಮೋಸವಲ್ಲ ಅವರ ವ್ಯವಹಾರ ಏನಾದರೂ ಇರಲಿ... ಹಣವಂತೂ ತಪ್ಪದೆ ಬರುತ್ತಿದೆಯಲ್ಲ.. ಎಷ್ಟು ದಿನ ಈ ಸ್ಕಿಮ್ ಇದ್ದೀತು! ಅವಕಾಶ ಸಿಕ್ಕಿದಾಗ ಉಪಯೋಗಿಸಿಕೊಂಡು ಜಾಣರಾಗಬೇಕು." ಹೀಗೆಲ್ಲಾ ತರ್ಕಿಸಿದವರು ಸಾಲಮಾಡಿ ಇಪ್ಪತ್ತು ಲಕ್ಷ ರೂಪಾಯಿಗಳನ್ನು ಅಕೌಂಟ್‌ಗೆ ಹಾಕಿಕೊಂಡರು. ಹಿಂದೆ ಬಂದ ಎರಡು ಲಕ್ಷವೂ ಅದರ ಜೊತೆಗೂಡಿತ್ತು. ಹಿಂದೆ ಕಳಿಸಿದ ಅಕೌಂಟಗೆ ಕಳಿಸಲು ಬ್ಯಾಂಕ್‌ಗೆ ಹೋದರೆ ಆಘಾತವಾಗಿ ಬಿಟ್ಟಿತ್ತು. ಕನಿಷ್ಟವಾಗಿ ಬ್ಯಾಂಕ್‌ನಲ್ಲಿ ಇರಬೇಕಾದ ಹಣ ಬಿಟ್ಟು ಮತ್ತೆಲ್ಲಾ ನಾಪತ್ತೆಯಾಗಿತ್ತು. ಕೂಡಲೆ ಆ ಫೋನ್ ಲಿಂಕ್‌ಗಾಗಿ ಹುಡುಕತೊಡಗಿದರು. ಹೂಂ...ಲಿಂಕ್ ನಾಪತ್ತೆಯಾಗಿತ್ತು. ಸಂದೇಶ ಹಾಕಿದವರ ಸುಳಿವೇ ಇಲ್ಲ. ಯಾವುದೇ ಮಾಹಿತಿ ತಿಳಿಯಲು ಅಸಾಧ್ಯವಾಯಿತು. ಕಾದು ನೋಡಿದರೂ ಪ್ರಯೋಜನವಾಗಲಿಲ್ಲ. ಕೊನೆಗೆ ಸೈಬರ್ ಕ್ರೈಂಗೆ ದೂರಿತ್ತರು. ಈಗಂತೂ ಅವರ ದುಃಖ, ಹತಾಶೆ ನೋಡಲಾಗದು. ಕೇಳಿದವರ ಅನುಕಂಪ, ಮರುಕ, ಸಹಾನುಭೂತಿ ಬೇರೆ; ಉಪದೇಶ ಕೇಳುವುದೇ ಕಷ್ಟವಾಗಿದೆ.

ಇತ್ತೀಚೆಗೆ ಪತ್ರಿಕೆಯಲ್ಲಿ ಬಂದ ಇಂತಹುದೇ ಸುದ್ದಿಯಿದು. ಬೆಂಗಳೂರಿನ ಜಯನಗರದ ವಾಣಿಜ್ಯೋದ್ಯಮಿಯೊಬ್ಬರಿಗೆ ವಾಟ್ಸ್‌ಪ್‌ನಲ್ಲಿ ಲಿಂಕ್ ಒಂದು ಬಂದಿತ್ತು. ಆದರೆ ಅವರು ಅದನ್ನು ಉಪೇಕ್ಷಿಸಿದ್ದರು. ಆದರೆ ಆ ಲಿಂಕ್‌ಗೆ ಸಂಬಂಧಪಟ್ಟಂತೆ ವ್ಯಕ್ತಿಯೊಬ್ಬರು ವಾಟ್ಸ್‌ಪ್ ಕರೆ ಮಾಡಿದ್ದರು. ನೂರಾ ಅರವತ್ತು ಮಂದಿಯ ವಾಟ್ಸ್‌ಪ್ ಗುಂಪು ಮಾಡಿರುವುದಾಗಿಯೂ ತಾವು ತಿಳಿಸಿರುವ ಅಕೌಂಟ್‌ಗಳಿಗೆ ಹಣ ಹಾಕಿ ಶೇರ್‌ಗಳನ್ನು ಕೊಂಡರೆ ಹಣ ದ್ವಿಗುಣವಾಗುವುದಾಗಿ ನಂಬಿಸಿದರು. ಕೊನೆಗೂ ಆ ವಾಣಿಜ್ಯೋದ್ಯಮಿಯ ಮನಸ್ಸನ್ನು ಗೆಲ್ಲುವಲ್ಲಿ ಆತ ಯಶಸ್ವಿಯಾಗಿದ್ದ. ಆತ ಕೊಟ್ಟಿದ್ದ ಅನೇಕ ಬ್ಯಾಂಕ್ ಅಕೌಂಟ್‌ಗಳಿಗೆ ಸುಮಾರು ಐದೂಕಾಲು ಕೋಟಿಯಷ್ಟು ಹಣವನ್ನು ಇವರು ಹಾಕಿದ್ದೂ ಆಯಿತು. ಶೇರ್‌ಗಳಿಗೆ ಹಣ ತೊಡಗಿಸಿದ್ದೂ ಆಯಿತು. ವಿಪರ್ಯಾಸವೆಂದರೆ ಶೇರ್‌ಗಳು ಮತ್ತು ಹಣ ಯಾವುದೂ ಸಿಗಲೇ ಇಲ್ಲ. ತಾವು ಕಳೆದುಕೊಂಡ ದೊಡ್ಡ ಮೊತ್ತದ ಹಣವನ್ನು ಹೇಗಾದರೂ ತಮಗೆ ಕೊಡಿಸುವಂತೆ ಸೈಬರ್ ಕ್ರೈಮ್ ವಿಭಾಗದಲ್ಲಿ ಇದೀಗ ದೂರಿತ್ತಿದ್ದಾರಂತೆ.

ಇನ್ನೊಬ್ಬ ಪದವೀಧರ ಯುವಕ. ಇನ್ನೂ ಹೆಚ್ಚು ಓದಬೇಕು; ಪರೀಕ್ಷೆಗಳನ್ನು ಮಾಡಿಕೊಳ್ಳಬೇಕು ಎಂಬುದು ಅವನ ಹಂಬಲ ಹೀಗೆ ಓದಲು ಬೇಕಾಗುವ ಪರೀಕ್ಷೆಗಳಿಗೆ ತಾಯಿ ತಂದೆಗೆ ಹೊರೆಯಾಗದಂತೆ ಸ್ವಲ್ಪ ಹಣಮಾಡಿಕೊಳ್ಳಬೇಕೆಂದು ಅವನಿಗನ್ನಿಸಿತು. ಶೇರ್‌ಗೆ ವಿನಿಯೋಗ ಮಾಡಲು ಸ್ವಲ್ಪ ಹಣಹಾಕಿ ಕೊಂಡಾಗ ಲಾಭ ಬಂದಿತ್ತು. ಮತ್ತೆ ಗೆಳೆಯನ ಬಳಿ ಸಾಲ ಮಾಡಿ ಶೇರ್‌ಗೆ ವಿನಿಯೋಗಿಸಿದ ಹಣ ಕೈಬಿಟ್ಟು ಹೋಯಿತು. ಇದೀಗ ಆತನ ತಂದೆಯೇ ಸ್ವಲ್ಪ ಸ್ವಲ್ಪವೇ ಸಾಲ ತೀರಿಸುತ್ತಿದ್ದಾರೆ. ಯುವಕನ ಮುಂದೆ ಓದುವ ಕನಸಿಗೆ ಸವಾಲಾಗಿ ಈ ಸಮಸ್ಯೆ ಬಂದೊದಗಿದೆ.

ಹೀಗೆ ಮೋಸ ಹೋಗುವವರು ಇರುವವರೆಗೂ ಮೋಸ ಮಾಡುವವರು ಇದ್ದೇ ಇರುತ್ತಾರೆ. ಮೋಸಗಾರರು ಬಲು ಚಾಣಾಕ್ಷರಾಗಿರುತ್ತಾರೆ. ಅನುಭವಿಗಳಾಗಿರುತ್ತಾರೆ. ಸಾಲ ಮಾಡಿಯೂ ಸಿಕ್ಕಿಹಾಕಿಕೊಳ್ಳದಿರುವುದು ಅವರಿಗೆ ಗೊತ್ತು. ಒಂದೆರಡು ವರ್ಷಗಳ ಹಿಂದೆ ಫೋನಿನಲ್ಲಿ ನನಗೆ ಸುದ್ದಿಯೊಂದು ಪದೇಪದೇ ಬರುತ್ತಿತ್ತು. "ನನ್ನ ಹತ್ತಿರ ಸಾಕಷ್ಟು ಹಣವಿದೆ. ಅದನ್ನು ನಿಮಗೆ ವರ್ಗಾಯಿಸಿದರೆ ನೀವು ಅದನ್ನು ಒಳ್ಳೆಯ ಉದ್ದೇಶಗಳಿಗಾಗಿ ಬಳಸಬಹುದಲ್ಲವೇ? ಹಣ ಸತ್ಕಾರ್ಯ, ಸೇವೆಗಾಗಿ ಬಳಕೆಯಾಗಬೇಕು. ಎಂಬುದು ನನ್ನ ಆಸೆ" ಎಂದು ವಿಚಾರಿಸುವಾಗ ಅನೇಕರಿಗೆ ಇದೇ ರೀತಿಯ ಸಂದೇಶ ಬಂದಿರುವುದು ಸ್ಪಷ್ಟವಾಗಿತ್ತು.ಇಷ್ಟೊಂದು ಸೇವಾಸಂಸ್ಥೆಗಳಿರುವಾಗ ಬೇರೆಯವರಿಗೆ ಹೀಗೆ ಅವರೇಕೆ ಹಣಕೊಟ್ಟಾರು! ಒಟ್ಟಾರೆ ಮೋಸದ ಜಾಲಗಳಿಗೆ ಸಿಗದಿರುವ ಎಚ್ಚರಿಕೆ ಬೇಕಷ್ಟೇ!

ತಣ್ಣೀರನ್ನೂ ತಣಿಸಿ ಕುಡಿಯಬೇಕಾದ ಕಾಲವಿದು. ಇದ್ದಕ್ಕಿದ್ದಂತೆ ಹಣ ದುಪ್ಪಟ್ಟು ಬರುವುದಾದರೂ ಹೇಗೆ? ಅಕ್ಷಯ ತದಿಗೆಯ ವಿಷಯದಲ್ಲಿಯೂ ಹಾಗೆ ಆ ದಿನ ಚಿನ್ನ ಕೊಂಡರೆ ಮಾತ್ರ ಮನೆಯಲ್ಲಿ ಲಕ್ಷ್ಮಿ ನೆಲೆಸುತ್ತಾಳೆ. ಎಂಬುದಕ್ಕಿಂತ ಹೆಚ್ಚು ಹೆಚ್ಚು ಒಳ್ಳೆಯ ಕೆಲಸ, ಪೂಜೆ, ದಾನ, ಧರ್ಮ, ಮಾಡಿದರೆ ವಿಶೇಷ ತೃಪ್ತಿಯಂತೂ ನಮ್ಮದಾಗುತ್ತದೆ. ನಮಗೆ ಒಳ್ಳೆಯ ಕಾರ್ಯ ಮಾಡುವ ಬುದ್ಧಿ ಅಕ್ಷಯವಾಗಬೇಕಲ್ಲವೆ?

■



ಸಾಗರ



ಚಾಮರಾಜನಗರ



ಭದ್ರಾವತಿ

# ಮಹಿಳೆಯರ ರಕ್ಷಣೆ – ಕಾನೂನು ಸುವ್ಯವಸ್ಥೆಗಾಗಿ



ಶಿಕಾರಿಪುರ



ಚಿತ್ರದುರ್ಗ



ಶಿವಮೊಗ್ಗ



ಕಿಕ್ಕೇರಿ


ಯಲಹಂಕ



# ಬಾಲಸಂಸ್ಕಾರ ವರ್ಗಗಳು


ಹಲಸೂರು

Regd. No. RNP/KA/BGS/636/2024-2026
Post at Bengaluru PSO 560 026 on 6/10 (of every month)
Licenced to Post without pre-payment
WPP No.: PMG/BG/WPP/338/2024-2026

Total Pages 44
RNI No. KARKAN/2002/08081
Date of Publication 01-05-2024


















## ಮತದಾನಕ್ಕಾಗಿ ಅಭಿಯಾನ

ಇಂದ

**ಹಿಂದುವಾಣಿ**
'ಧರ್ಮಶ್ರೀ',
91, ಶಂಕರಪುರ,
ಬೆಂಗಳೂರು – 560 004

# ಹಿಂದುವಾಣಿ

Printed and Published by N.P. Muniraju on behalf of and owned by
Vishwa Hindu Parishad and Printed at Rastrotthana Mudranalaya, No. 8 & 8/1, Sathyapramoda Teertha Building
3rd Main, 9th Cross, Chamarajapete, Bengaluru - 560 018, Karnataka.
Published at #91, Dharmashri, Shankarapuram, Bengaluru - 560 004 Karnataka. Editor T.A.P. Shenoy